ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 | Issue : 171 | Thursday 13-03-2025 | E-mail : maruti.b.hosamani76@gmail.com | Page: 4 | Price : Rs. 1/-

ತಾಯಿ ಮಗು ಲಸಿಕಾ ವಂಚಿತರಾಗದಂತೆ ಜಾಗೃತಿ ವಹಿಸುವುದು: ಮುಖ್ಯ ಎಸ್.ಎಸ್. ಅಂಗಡಿ

ಸಿಹಿ ಕಹಿ ಸುದ್ದಿ

ಶಿರೂರು : ಬಾಗಲಕೋಟೆ ಜಿಲ್ಲೆಯ ತಾಲೂಕಿನ ಹೊನ್ನಾಕಟ್ಟಿ ಗ್ರಾಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟ ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ ರಾಷ್ಟ್ರೀಯ ಲಸಿಕಾಕರಣ ಪ್ರಗತಿ ಸಾಧನೆಗೆ ಲಸಿಕಾಕರಣ ಕ್ರಿಯಾ ಯೋಜನೆಗೆ ಫಲಾನುಭವಿ ಮಕ್ಕಳ ನಿಖರ ಮಾಹಿತಿಗಾಗಿ ಸಾರ್ವತ್ರಿಕ ಲಸಿಕಾಕರಣ ಫಲಾನುಭವಿಗಳ ಗರುತಿಸಲು, ಮನೆ ಮನೆ ಸಮೀಕ್ಷೆ ಕಾರ್ಯ ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್. ಎಸ್ ಅಂಗಡಿವರು ಸಮೀಕ್ಷೆ ಕಾರ್ಯ ಮರು ಪರೀಕ್ಷಿಸಿ ಸಾರ್ವಜನಿಕರಿಗೆ ಪಾಲಕರಿಗೆ ಸಮಗ್ರ ಲಸಿಕಾ ಅಭಿಯಾನದ ವಿವರಿಸಿದರು. 0–5 ವಯೋ ಮಾನದ ಮಕ್ಕಳಲ್ಲಿ ಮಾರಕ ರೋಗಗಳಾದ ಪೋಲಿಯೋ ಬಾಲ ಕ್ಷಯ, ನಾಯಿ ಕೆಮ್ಮು, ಗಂಟಲು ಮಾರಿ ನಂಜು ರೋಗ, ವಾಂತಿ ಬೇಧಿ, ಬಿಳಿ ಕಾಮಾಲೆ ನ್ಯೊಮೆನಿಯಾ, ಮೆದಳು ಜ್ವರ ತಡೆಗೆ ವಯೋಮಾನ ಅನುಸಾರ ಲಸಿಕೆ

ಹಾಕಲಾಗುವುದು ಗರ್ಭಿಣಿಯರಿಗೆ ನಂಜು ನಿರೋಧಕ ಲಸಿಕಾಕರಣ, ಪ್ರತಿ ಶತ ಸಾಧನೆ ಯಾವುದೇ ಮಗು ಲಸಿಕೆ ವಂಚಿತವಾಗುವದನ್ನು ತಡೆಯಲು, 0–5 ವಯೋ ಮಾನದವರ ಗರ್ಭಿಣಿಯರ ಫಲಾನುಭವಿಗಳ ಗುರುತಿಸಲು, ಮನೆ ಮನೆ ಸಮೀಕ್ಷೆ ಕಾರ್ಯವನ್ನು ಗ್ರಾಮಕ್ಕೆ ಸಂಬಂಧ ಪಟ್ಟ ಆಶಾ ಮನೆ ಮನೆ ಸಮೀಕ್ಷೆ ಮೂಲಕ ನಿಖರ ಮಾಹಿತಿ ದತ್ತಾಂಶ ಸಂಗ್ರಹಿಸಿ ಉಪಕೇಂದ್ರ ಸಲ್ಲಿಕೆ ನಂತರ ಆರೋಗ್ಯ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ಪರೀಶೀಲಸಿ ರಾಷ್ಟ್ರೀಯ ಚುಚ್ಚುಮದ್ದು ಕ್ರಿಯಾ ಯೋಜನೆ ತಯಾರಿಸಿ ಲಸಿಕಾ ಯಶಸ್ವಿ ಗೊಳಿಸಲಾಗುವುದು ಸಾರ್ವತ್ರಿಕ ಲಸಿಕಾಕರಣ ಅಭಿಯಾನ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಉಪಕೇಂದ್ರ, ಅಂಗನವಾಡಿ ಕೇಂದ್ರಗಳಲ್ಲಿ ಪ್ರತಿ ತಿಂಗಳು ನಿಯಮಿತವಾಗಿ ಜರಗುವುದು ಇದರ ಸದುಪಯೋಗ ಪಡೆಯ ಬೇ–ಕೆಂದರು. ರಾಷ್ಟ್ರೀಯ ಲಸಿಕಾ ಕರಣ ಫಲಾನುಭವಿಗಳ ಸಮೀಕ್ಷೆ ಆರೋಗ್ಯ ಅರಿವು ಜಾಗೃತಿ ಕಾರ್ಯಕ್ರಮದಲ್ಲಿ, ಆರೋಗ್ಯ ಇಲಾಖೆಯ ವಿವಿಧ ಹಂತದ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮದ ಮುಖಂಡರು ಪಾಲಕರು ಫಲಾನುಭವಿಗಳು ಭಾಗವಹಿಸಿದ್ದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಣೆ

ಸಿಹಿ ಕಹಿ ಸುದ್ದಿ,

ಬೇಕಿನಾಳ : ಮನುಕುಲದ ಉದ್ಧಾರಕರು ಶ್ರೀ 1008 ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೊತ್ಸವ 12/3/2025

ತಾಳಿಕೋಟೆ ತಾಲೂಕಿನ ಬೇಕಿನಾಳ ಗ್ರಾಮದಲ್ಲಿ 1008 ಜಗದ್ಗುರು. ರೇಣುಕಾಚಾರ್ಯರ ಜಯಂತಿ ಮಾಡಲಾಯಿತು. ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಪಂಚ ಪೀಠದ ಬಾವುಟ ಹಾರಿಸಲಾಯಿತು.

ಹರ ಮುನಿದರು ಗುರು ಕಾಯುವನು ಎನ್ನುವ ಲೋಕ ಯುಕ್ತಿ ಯಂತೆ ಮಾನವ ಧರ್ಮಕ್ಕೆ ಜಯವಾಗಲಿ ಧರ್ಮ ದಿಂದಲೇ ವಿಶ್ವ–ಕ್ಕೆ ಶಾಂತಿ ಯಂಬ ಶಾಂತಿ ಮಂತ್ರ ದಿಂದ ಲೋಕ ಕಲ್ಯಾಣಕ್ಕಾಗಿ ಸಂಚಾರ ಗೈದರು ಇವರು ಕೊಲ್ಲಿಪಾಕಿ ಯಸೋಮೇಶ್ವರ ಲಿಂಗದಲ್ಲಿ ಉದಯಿಸಿ ಹಾಗು ಉಜ್ಜಿನಿ ರಂಬಾಪುರಿ ಕೇದಾರ ಶ್ರೀ ಶೈಲ ಕಾಶಿಯಲ್ಲಿ ಉದಯಿಸಿದರು. ಸಿದ್ಧಾಂತ ಶಿಖಾಮಣಿ ಹಾಗೂ ಮಾನವೀಯ ಮೌಲ್ಯಗಳು ಸಂಸ್ಕಾರ ಸಂಸ್ಕೃತಿ ಆಚಾರ ವಿಚಾರ ಮಂತ್ರ ಜಪಿಸುತ್ತಾ ಬಂದರು. ರೇಣುಕಾಚಾರ್ಯರ ಬಗ್ಗೆ ಪಿ.ಕೆ.ಪಿ.ಎಸ್ ನ ನಿರ್ದೇಶಕರಾದ ಶರಣಯ್ಯ ಬೇನಾಳಮಠ್ ಮಾತನಾಡಿದರು. ಈರಯ್ಯ ಅಲಾಳಮಠ್ ಮಹಾಂತೇಶ್ ಹಿರೇಮಠ್ ಅಪಯ್ಯ ಕರಕಳ್ಳಿ ಮಠ್ ಶ್ರೀಶೈಲ್ ಹಿರೇಮಠ್ ವಿರೇಶ್ ಹಿರೇಮಠ ವಿರೇಶ್ದೇವು ಅಲಾಳ ಮಠ್ ಬೇನಾಳಮಠ್ ಮಂಜುನಾಥ್ ಷಣ್ಣಮುಖಯ್ಯ ಶಿವನಗೌಡ ವಿನಾಯಕ ಇತರರು ಇದ್ದರು ಊರಿನ ಹಿರಿಯರಾದ. ಈರಯ್ಯ ಅಲಾಳಮಠ್, ಮಹಾಂತೇಶ್ ಹಿರೇಮಠ್, ಅಪಯ್ಯ ಕರಕಳ್ಳಿಮಠ್, ಶ್ರೀಶೈಲ್ ಹಿರೇಮಠ್, ವಿರೇಶ್ ಹಿರೇಮಠ, ವಿರೇಶ್ದೇವು ಅಲಾಳ ಮಠ್, ಬೇನಾಳಮಠ್, ಮಂಜುನಾಥ್ ಷಣ್ಣಮುಖಯ್ಯ ಶಿವನಗೌಡ ವಿನಾಯಕ ಶಂಕು ಟಕಳಕ್ಕಿ, ನಿಂಗಣ್ಣ ಚಟರಕ್ಕಿ ಇತರರು ಇದ್ದರು.

ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶರಣಯ್ಯ.ಈ.ಬೇನಾಳಮಠ್.ತಾಳಿಕೋಟೆ

ಹೋಳಿ, ರಂಜಾನ್ ಹಬ್ಬದ ನಿಮಿತ್ತವಾಗಿ ಮಾನ್ವಿಯಲ್ಲಿ ಶಾಂತಿ ಸಭೆ

ಸಿಹಿ ಕಹಿ ಸುದ್ದಿ, ಮಾನ್ವಿ : ಮಾನ್ವಿ ಅಂದರೆ ಶಾಂತಿಯತೆಯ ಊರು ಎಂದು ಪ್ರತೀತಿ ಇದೆ. ಹೀಗಾಗಿ ಹೋಳಿ ಹಾಗು ರಂಜಾನ್ ಹಬ್ಬವನ್ನು ಶಾಂತಿಯಿಂದ ಆಚರಿಸಿ ಎಂದು ಪಿ.ಎಸ್.ಐ ಸಣ್ಣ ಈರೇಶ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮಂಗಳವಾರ ನಡೆದ ಹೋಳಿ ಹಾಗು ರಂಜಾನ್ ಹಬ್ಬದ ನಿಮಿತ್ತ ನಡೆದ ಶಾಂತಿಯ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಯಾರೋ ಕಿಡಿಗೇಡಿಗಳು ಮಾಡುವ ಕೆಲಸಕ್ಕೆ ನಾವೆಲ್ಲರೂ ತಲೆ ತಗ್ಗಿಸುವ

ವಿಚಾರ ಇದ್ದು, ಇದಕ್ಕಾಗಿ ಸಮಾಜದ ಮುಖಂಡರು ತಮ್ಮ ಯುವಕರಿಗೆ ತಿಳಿ ಹೇಳುವ ಕೆಲಸ ಮಾಡಬೇಕು ಎಂದರು.

ಹಿರಿಯ ವಕೀಲ ಗುಮ್ಮ ಬಸವರಾಜ ಮಾತನಾಡಿ, ಮಾನ್ವಿಯಲ್ಲಿ ಹಿಂದೂ ಹಾಗು ಮುಸ್ಲಿಂ ಸಮಾಜದವರು ಅಣ್ಣ ತಮ್ಮಂದಿರಾಗಿ ಇದ್ದಾರೆ. ಉದಾಹರಣೆ ಎಂದರೆ ನಮ್ಮ ತಾಯಿಯ ಊರು ದೇವದುರ್ಗ ಆದರೆ ಆ ಊರಲ್ಲಿದ್ದ ಮುಸ್ಲಿಂ ಸಮಾಜದವರು ಬಾರಪ್ಪ ಅಳಿಯ ಎಂದು ಪ್ರೀತಿಯಿಂದ ಕರೆಯುತ್ತಾರೆ ಅಂದರೆ ಇದುವೆ ಪ್ರೀತಿ ಬಾಂಧವ್ಯ ಎಂದರು.

ವಕೀಲ ಶಾಮಸುಂದರ್ ನಾಯಕ ಮಾತನಾಡಿ, ಹೋಳಿ ಹಾಗು ರಂಜಾನ್ ಹಬ್ಬ ಬಂದರೆ ಸಾಕು ನಾವೆಲ್ಲರೂ ಪ್ರೀತಿಯಿಂದ ಇರುತ್ತೇವೆ. ಹೋಳಿ ಬಂದರೆ ನಾವು ಪ್ರೀತಿ ಇರುವ ವ್ಯಕ್ತಿಗೆ ಬಣ್ಣ ಹಚ್ಚುತ್ತೇವೆ. ಹೀಗಾಗಿ ನಾವೆಲ್ಲರೂ ಒಂದಾಗಿ ಆಚರಿಸೋಣ ಎಂದರು.

ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ

ಮಹಿಳಾ ದಿನಾಚರಣೆ ಸಪ್ತಾಹ: ಮಹಿಳೆ ಮತ್ತು ಕಾನೂನು ಉಪನ್ಯಾಸ

ಜಮಖಂಡಿ : ಮಾರ್ಚ್ 6 ರಂದು ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಸಾಂಸ್ಕೃತಿಕ ಘಟಕ, ಮಹಿಳಾ ಸಬಲೀಕರಣ ಹಾಗೂ ಐ.ಕ್ಯೂ.ಎ.ಸಿ. ಸಹಯೋಗದೊಂದಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಪ್ತಾಹದ ಪ್ರಯುಕ್ತ 'ಮಹಿಳೆ ಮತ್ತು ಕಾನೂನು' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ರಘುವೀರ ಕುಲಕರ್ಣಿ,ಪ್ರಾಚಾರ್ಯರುಮತ್ತುಡೀನರು, ಕಾನೂನು ವಿಭಾಗ, ಬಿ.ಎಲ್.ಡಿ.ಇ.ಎ. ಡೀಮ್ಡ್ ವಿಶ್ವವಿದ್ಯಾಲಯ, ವಿಜಯಪುರ ಇವರು ವಿದ್ಯಾರ್ಥಿನಿಯರನ್ನು ಕುರಿತು ಮಾತನಾಡಿದರು. ಅವರು "ಸಮಾಜದ ಪ್ರಗತಿಯಲ್ಲೂ, ನ್ಯಾಯಪ್ರದ ವ್ಯವಸ್ಥೆಯ ನಿರ್ಮಾಣದಲ್ಲೂ ಮಹಿಳೆಯರ ಪಾತ್ರ ಅಮೂಲ್ಯ. ಆದರೆ ಇತಿಹಾಸದ ಅನೇಕ ಹಂತಗಳಲ್ಲಿ ಮಹಿಳೆಯರು ಅನ್ಯಾಯ, ಅಸಮಾನತೆ ಮತ್ತು ಶೋಷಣೆಯ ಭಾರವನ್ನು ಸಹಿಸಿಕೊಂಡಿದ್ದಾರೆ. ಈ ಅಸಮಾನತೆಯನ್ನುಸರಿಪಡಿಸುವುದರಲ್ಲೂ, ಮಹಿಳೆಯರಿಗೆ ಸಮಾನ ಹಕ್ಕುಗಳ ಭರವಸೆ ನೀಡುವುದರಲ್ಲೂ ಕಾನೂನು ವ್ಯವಸ್ಥೆ ಮಹತ್ವದ ಪಾತ್ರ ವಹಿಸಿದೆ. ಭಾರತೀಯ ಸಂವಿಧಾನ ಮಹಿಳೆಯರಿಗೆ ಸಮಾನತೆ, ಗೌರವ ಮತ್ತು ಸ್ವಾತಂತ್ರ್ಯದ ಭರವಸೆಯನ್ನು ನೀಡಿದೆಯಾದರೂ, ವಾಸ್ತವದಲ್ಲಿ ಮಹಿಳೆಯರು ಇನ್ನೂ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಅಲೆಮಾರಿ ಸಂಪ್ರದಾಯದಿಂದ ಹಿಡಿದು, ಮಕ್ಕಳ ವಿವಾಹ, ದೌರ್ಜನ್ಯ, ಲೈಂಗಿಕ ಕಿರುಕುಳ, ಗೃಹಹಿಂಸೆ ಮೊದಲಾದ ಸಮಸ್ಯೆಗಳು ಮಹಿಳೆಯ ಬದುಕಿಗೆ ನಿರಂತರ ಸವಾಲುಗಳನ್ನು ಒಡ್ಡುತ್ತವೆ. ಕಾನೂನಿನ ದೃಷ್ಟಿಯಿಂದ, ಇಂತಹ ಅನ್ಯಾಯಗಳನ್ನು ತಡೆಗಟ್ಟಲು ಮತ್ತು ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಹಲವು ಕಾನೂನುಗಳಿವೆ. ಉದಾಹರಣೆಗೆ, 1961 ರ ವರದಕ್ಷಿಣೆ ನಿಷೇಧ ಕಾಯ್ದೆ, 2005 ರ ಗೃಹ ಹಿಂಸೆಯಿಂದ ಮಹಿಳೆ ರಕ್ಷಣೆ ಕಾಯ್ದೆ , 2013 ರ ಲೈಂಗಿಕ ಕಿರುಕುಳ ತಡೆ ಕಾಯ್ದೆ ಮುಂತಾದವು ಮಹಿಳೆಯರಿಗೆ ರಕ್ಷಣೆ ನೀಡಲು ರೂಪಿಸಲಾದ ಪ್ರಮುಖ ಕಾನೂನುಗಳು. ಇಷ್ಟೇ ಅಲ್ಲದೇ 1948 ರಲ್ಲಿ, ಮಹಿಳೆಯರು ಅಪಾಯಕಾರಿ ಕೆಲಸಗಳಲ್ಲಿ ತೊಡಗಿಸಿಕೊಳ್ಳದಂತೆ ಕಾರ್ಖಾನೆ ಕಾಯ್ದೆ ಜಾರಿಗೊಂಡಿತು.

1949 ರಲ್ಲಿ, ಸಮಾನ ಕೆಲಸಕ್ಕೆ ಸಮಾನ ವೇತನದ ತತ್ವವನ್ನು ಒತ್ತಿ ಹೇಳುವ ಚರ್ಚೆಗಳು ಪ್ರಾರಂಭವಾದವು. 1961 ರಲ್ಲಿ, ಮಹಿಳೆಯರ ಆರೋಗ್ಯ ಮತ್ತು ಹಕ್ಕುಗಳತ್ತ ಗಮನ ಹರಿಸಲು ಮಾತೃತ್ವ ಲಾಭ ಕಾಯ್ದೆ ಹಾಗೂ ವರದಕ್ಷಿಣೆ ನಿಷೇಧ

ಕಾಯ್ದೆ ಜಾರಿಗೆ ಬಂದವು. 1971 ರಲ್ಲಿ , ಮಹಿಳೆಯರ ಆರೋಗ್ಯ ಮತ್ತು ಆಯ್ಕೆ ಹಕ್ಕಿಗೆ ಸಂಬಂಧಿಸಿದಂತೆ ವೈದ್ಯಕೀಯ ಗರ್ಭಪಾತ ಕಾಯ್ದೆ ಜಾರಿಗೆ ಬಂತು. 1986 ರಲ್ಲಿ, ಮುಸ್ಲಿಂ ಮಹಿಳೆಯರ ಜೀವನೋಪಾಯ ಹಾಗೂ ತಲಾಖಿನ ನಂತರ ಅವರ ಹಕ್ಕುಗಳನ್ನು ಕಾಯ್ದಿರಿಸಲು ಮುಸ್ಲಿಂ ಮಹಿಳಾ ಕಾನೂನು ಜಾರಿಗೆ ಬಂದಿತು. 1994 ರಲ್ಲಿ, ಹೆಣ್ಣು ಮಗು ಭ್ರೂಣ ಹತ್ಯೆ ತಡೆಗಟ್ಟಲು ಪ್ರೀ–ಕಾನ್ಸೆಪ್ಷನ್ ಮತ್ತು ಪ್ರೀ–ನಾಟಲ್ ಡಯಾಗ್ನೋಸ್ಟಿಕ್ ತಂತ್ರಜ್ಞಾನ ಕಾಯ್ದೆ ಜಾರಿಯಾಯಿತು. ಈಗಿನ ದಿನಗಳಲ್ಲಿ ಮಹಿಳೆಯರು ಅನುಭವಿಸುವ ಹೊಸ ರೀತಿಯ ಅಪಾಯಗಳಿಗೆ ತಡೆಯಾಗಿ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ 2013 ರಲ್ಲಿ ಜಾರಿಗೆ ಬಂತು. ಅದೇ ರೀತಿ, ಸ್ಟಾಕಿಂಗ್ ಹಾಗೂ ಸೈಬರ್ ಸ್ಟಾಕಿಂಗ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕಾನೂನು ಬಲವಂತವಾಗಿದೆ. ಅಸಭ್ಯ ವರ್ತನೆ (ಐಪಿಸಿ ಸೆಕ್ಷನ್ 354) ವಿರುದ್ಧವೂಕಾನೂನುಕ್ರಮಗಳಿವೆ.ಇದಲ್ಲದೆ, ಭಾರತೀಯ ದಂಡ ಸಂಹಿತೆಯಲ್ಲಿಯೂ ಮಹಿಳೆಯರ ವಿರುದ್ಧ ನಡೆಯುವ ಅಪರಾಧಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸುವ ಕಾಯ್ದೆಗಳಿವೆ. ಆದಾಗ್ಯೂ, ಕೇವಲ ಕಾನೂನುಗಳು ಇರುವುದಷ್ಟೆ ಸಾಲದು; ಅವುಗಳನ್ನು ಸಮರ್ಥವಾಗಿ ಅಳವಡಿಸುವ ಸಾಮರ್ಥ್ಯವೂ ಬೇಕು. ಅನೇಕ ಸಂದರ್ಭಗಳಲ್ಲಿ, ಮಹಿಳೆಯರು ತಮ್ಮ ಹಕ್ಕುಗಳನ್ನು ತಿಳಿದಿರದೆ ಇರುವುದರಿಂದ, ಅವರ ಮೇಲೆ ನಡೆಯುವ ಅಕ್ರಮಗಳು ವರದಿಯಾಗದೆ ಹೋಗುತ್ತವೆ. ಅಲ್ಲದೆ, ಅನೇಕ ಕಾನೂನು ಕ್ರಮಗಳು ಕಾಗದದಲ್ಲಿ ಮಾತ್ರ ಸೀಮಿತವಾಗಿದ್ದು , ಪ್ರಾಯೋಗಿಕವಾಗಿ ಅನೇಕ ಸವಾಲುಗಳನ್ನು ಎದುರಿಸುತ್ತವೆ. ಶಿಕ್ಷಣ, ಸ್ವಾವಲಂಬನೆ ಮತ್ತು ಜಾಗೃತಿಯೊಂದಿಗೆ ಮಹಿಳೆಯರು ತಮ್ಮ ಹಕ್ಕುಗಳ ಮಾಹಿತಿ ಬಗ್ಗೆ ಸ್ಪಷ್ಟವಾಗಿರಬೇಕು. ನಾವೆಲ್ಲರೂ ಮಹಿಳೆಯರ ಹಕ್ಕುಗಳ ಪರ ನಿಲ್ಲಬೇಕು. ಕಾನೂನನ್ನು ಸರಿಯಾಗಿ ಅನುಷ್ಠಾನಗೊಳಿಸುವಂತೆ ಒತ್ತಾಯಿಸಬೇಕು. ಸಮಾನತೆ ಎಂಬುದು ಕೇವಲ ಮಾತುಗಾರಿಕೆಯ ವಿಷಯವಾಗಿರಬಾರದು. ಅದು ನಮ್ಮ ನಿತ್ಯಜೀವನದ ಭಾಗವಾಗಬೇಕು" ಎಂದು ಹೇಳಿದರು.

ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲೆ ಡಾ. ಸುನಂದಾ ಎಸ್. ಶಿರೂರ ಅವರು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ " ಮಾನವ ಸಮುದಾಯದ ಬೆಳವಣಿಗೆಯಲ್ಲಿ ಮಹಿಳೆಯರು ಎಂದೂ ಹಿಂದುಳಿಯದೆ ತಮ್ಮ ಪಾತ್ರವನ್ನು ನಿರ್ವಹಿಸಿದ್ದಾರೆ. ಆದರೆ ಇತಿಹಾಸ ಸಾಕ್ಷಿ ನೀಡಿದಂತೆ, ಮಹಿಳೆಯರು ಬಹಳ ಕಾಲದವರೆಗೆ ಅನ್ಯಾಯ, ಶೋಷಣೆ ಮತ್ತು ಅಸಮಾನತೆಯ ಕರಿನೆರಳು ಎದುರಿಸಿದ್ದಾರೆ. ಈ ಅನ್ಯಾಯವನ್ನು ಸರಿಪಡಿಸುವಲ್ಲಿ ಕಾನೂನು ಒಂದು ಪ್ರಮುಖ ಸಾಧನವಾಗಿದೆ. ಭಾರತೀಯ ಸಂವಿಧಾನ ಸಮಾನತೆಯನ್ನು ಪ್ರತಿಪಾದಿಸುತ್ತದೆ. ಪುರುಷರಂತೆ ಮಹಿಳೆಯರೂ ಸಮಾನ ಹಕ್ಕುಗಳೊಂದಿಗೆ ಬದುಕಬೇಕು ಎಂಬುದು ಇದರ ಮೂಲ ಉದ್ದೇಶವಾಗಿದೆ. ಆದರೆ, ಹಿಂದಿನ ಕಾಲದಲ್ಲಿ ಮಹಿಳೆಯರನ್ನು ಶೋಷಿಸಿದ ಅನೇಕ ಪರಂಪರೆಗಳು, ಆಚರಣೆಗಳು, ರೂಢಿಗಳು ಇಂದಿಗೂ ನಾವು ಕೆಲವೊಂದು ಕಡೆ ಕಾಣುತ್ತೇವೆ. ಇದನ್ನು ಸರಿಪಡಿಸಲು ಹಲವಾರು ಕಾನೂನುಗಳು ಅಸ್ತಿತ್ವದಲ್ಲಿವೆ. ಉದಾಹರಣೆಗೆ, ಮಕ್ಕಳ ವಿವಾಹವನ್ನು ನಿಷೇಧಿಸುವ 2006 ರ ಕಾಯ್ದೆ, ಗರ್ಭಪಾತ ಹಕ್ಕುಗಳನ್ನು ಸುರಕ್ಷಿತಗೊಳಿಸುವ ವೈದ್ಯಕೀಯಗರ್ಭಪಾತಕಾಯ್ದೆಹೀಗೆಅನೇಕ ಕಾನೂನುಗಳು ಅಸ್ತಿತ್ವದಲ್ಲಿವೆ. ಕಾನೂನಿನ ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಎರಡು ಪ್ರಮುಖ ಅಂಶಗಳ ಅಗತ್ಯವಿದೆ. ಒಂದು, ಮಹಿಳೆಯರಲ್ಲಿ ಕಾನೂನಿನ ಅರಿವು ಹೆಚ್ಚಿಸಬೇಕು; ಎರಡನೆಯದು, ಕಾನೂನಿನ ನಿರ್ವಹಣೆಯಲ್ಲಿ ಪಾರದರ್ಶಕತೆ ಇರಬೇಕು. ಶಿಕ್ಷಣವು ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ, ತಮಗೆ ಆಗುವ ಅನ್ಯಾಯದ ವಿರುದ್ಧ ಹೋರಾಡುವ ಶಕ್ತಿಯನ್ನು ನೀಡುತ್ತದೆ. ಮಹಿಳೆಯರು ಕಾನೂನನ್ನು ತಮ್ಮ ಅಸ್ತ್ರವಾಗಿ ಬಳಸಿ, ಸ್ವಾಭಿಮಾನದಿಂದ ಬದುಕಬೇಕು" ಎಂದು ಹೇಳಿದರು.

ಸಮಾರಂಭದಲ್ಲಿ ಡಾ. ವಿ. ಆರ್. ದಳವಾಯಿ, ಡಾ. ಎಮ್. ಎಮ್. ಮಂಟೂರ, ಡಾ. ಅರುಣ ವಾಯ್. ಕಾಂಬಳೆ, ಡಾ. ಬಿ. ಎನ್. ಜಾಧವ, ಡಾ. ಎಸ್. ಎಸ್. ಸಿದ್ದಾಪೂರ, ಎಸ್. ಕೆ. ಡೇಂಬರೆ, ಶ್ರೀಮತಿ ಸುಮಾ ವೈ. ಎನ್., ಡಾ. ಸುನೀಲ ಮಣಕವಾಡ, ಶ್ರೀಮತಿ ಪಾಟೀಲ ಸವಿತಾ ಕಲಗೊಂಡ, ಡಾ. ಜಯಮ್ಮಾ, ಕು. ಶ್ರೀದೇವಿ ಕವಟಕೊಪ್ಪ, ಶ್ರೀಮತಿ ರಾಜಶ್ರೀ ರಾಯಣ್ಣವರ, ಶ್ರೀಮತಿ ಎಸ್. ಎಲ್. ಕೋಟ್ಯಾಳ, ಡಾ. ಎಮ್. ಎಮ್. ಅಂಬಲಿ, ಸಿ. ವಿ. ಗುಣದಾಳ, ಡಾ. ಡಿ. ಬಿ. ಚನ್ನಪ್ಪಗೋಳ, ಶ್ರೀಮತಿ ಅಶ್ವಿನಿ ಬಬಲಿ, ಕು. ಶಗುಪ್ತಾ ಬಿಸ್ತಿ, ಕು. ಸುಪ್ರಿಯಾ ಪಾಟೀಲ, ಕು. ಪುಷ್ಪಾ ಹೊಸಟ್ಟಿ ಮುಂತಾದವರು ಭಾಗವಹಿಸಿದ್ದರು.

ಕು. ಪುಷ್ಪಾ ಮತ್ತು ಕು. ಸಂಜನಾ ಪ್ರಾರ್ಥಿಸಿದರು. ಕು. ರಚಿತಾ ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಕು. ಜಬೀನಾ ಮೌಲ್ವಿ ಮಾತನಾಡಿದರು. ಕು. ಪ್ರಿಯಂಕಾ ಕಂಬಾರ ಸೊಗಸಾಗಿ ನಿರೂಪಿಸಿದರು. ಶ್ರೀಮತಿ ಶಿವಲೀಲಾ ಹೆಚ್. ವಂದಿಸಿದರು.

ಬೀದಿ ಬದಿ ವ್ಯಾಪಾರಸ್ಥರಿಗಾಗಿ ಬೀದಿ ನಾಟಕ ಪ್ರದರ್ಶನ

ತೇರದಾಳ: ಎಲ್ಲರಿಗೂ ಸರ್ಕಾರಿ ನೌಕರಿ ದೊರೆಯಲು ಸಾಧ್ಯವಿಲ್ಲ. ಸ್ವಂತ ಉದ್ಯೋಗ ಮಾಡಿಯೂ ಸಾಧನೆ ಮಾಡಬಹುದು. ಆದ್ದರಿಂದಲೇ ಸ್ವಾವಲಂಬಿ ಜೀವನ ನಡೆಸಲು ಕೇಂದ್ರ ಸರಕಾರ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಜಾರಿಗೊಳಿಸಿ ಬೀದಿ ಬದಿ ವ್ಯಾಪಾರ ನಡೆಸಲು ಸಹಾಯಧನ ನೀಡುತ್ತಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಹೇಳಿದರು.

ಸಂತೆ ದಿನವಾದ ಗುರುವಾರ ಪಟ್ಟಣದಲ್ಲಿ ಬೀದಿ ಬದಿ ಕುಳಿತು ವ್ಯಾಪಾ

ಸಮಾಜದ ಸಮಗ್ರ ಅಭಿವೃದ್ಧಿಗೆ ಮಹಿಳಾ ಸ್ವಾವಲಂಬನೆ ಬಹು ಮುಖ್ಯ: ವಿದ್ಯಾಸಾಗರ

ವಿಜಯಪುರ: ಮಹಿಳೆಯರು ಸ್ವಾವಲಂಬಿಯಾಗುವುದು ಸಮಾಜದ ಸಮಗ್ರ ಅಭಿವೃದ್ಧಿಗೆ ಬಹಳ ಮುಖ್ಯ ಎಂದು ಬೆಂಗಳೂರಿನ ನಿವೃತ್ತ ಪ್ರಾಧ್ಯಾಪಕ ಪ್ರೊ. ಐ.ಎಸ್. ವಿದ್ಯಾಸಾಗರ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಬುಧವಾರ ಆಯೋಜಿಸಿದ್ದ 'ಮಹಿಳೆಯರ ವಿಮೋಚನೆಗೆ ಡಾ. ಬಿ.ಆರ್. ಅಂಬೇಡ್ಕರವರ ಕೊಡುಗೆಗಳು' ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತವು ವಿವಿಧ ಜನಾಂಗ ಮತ್ತು ಧರ್ಮಗಳಿಂದ ಕೂಡಿದ ರಾಷ್ಟ್ರವಾಗಿದ್ದು, ಇತಿಹಾಸದಲ್ಲಿ ಮಹಿಳೆಯರು ಪಿತೃಪ್ರಧಾನ ವ್ಯವಸ್ಥೆಯಿಂದ ಶೋಷಣೆಗೆ ಒಳಗಾಗಿದ್ದಾರೆ. ಈ ಶೋಷಣೆಯನ್ನು ತೊಡೆದುಹಾಕಲು ಮತ್ತು ಮಹಿಳೆಯರ ಸಬಲಿಕರಣಕ್ಕೆ ಪೂರಕವಾಗಿ ಹಲವು ಮಹಾನುಭಾವರು ಶ್ರಮಿಸಿದ್ದಾರೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸ್ನಾತಕ ಪದವಿ (ಎನ್.ಇ.ಪಿ) ವಿಭಾಗ ವಿಶೇಷಾಧಿಕಾರಿ ಪ್ರೊ. ಸಕ್ಪಾಲ್ ಹೂವಣ್ಣ ಮಾತನಾಡಿ, ವಿದ್ಯಾರ್ಥಿನಿಯರಿಗೆ ಸಾಮಾಜಿಕ ಮಹಿಳಾ ಸ್ಥಾನಮಾನ ಮತ್ತು ಕಾಯ್ದೆ ಕಾನೂನುಗಳ ಕುರಿತು ತಿಳಿಸಿದರು.

ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕ ಜಗದೀಶ ಜಾವೂರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆ ಸಮಾನತೆ ಸಾಧಿಸಲಿ: ಪ್ರೊ. ಕೆ. ರಮೇಶ

ವಿಜಯಪುರ: ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆ ಸಮಾನತೆ ಸಾಧಿಸಲಿ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನ್ ಪ್ರೊ. ಕೆ. ರಮೇಶ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಬುಧವಾರ ಆಯೋಜಿಸಿದ್ದ 'ಸ್ಮಾರ್ಟ ಆಪ್ಟಿಕಲ್ ಮಟೆರಿಯಲ್ಸ ಆ್ಯಂಡ್ ಆ್ಯಂಗುಲರ್ ಮೊಮೆಂಟಮ್' ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಿತ್ಯಜೀವನದಲ್ಲಿ ವೈಜ್ಞಾನಿಕ ವಿಚಾರಗಳು, ಆಚರಣೆಗಳು ಬಳಕೆಯಲ್ಲಿ ಇರಬೇಕು. ವಿದ್ಯಾರ್ಥಿನಿಯರ ಜೀವನಕ್ರಮವೂ ವೈಜ್ಞಾನಿಕತೆಯಿಂದ ಒಳಗೊಂಡಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಶಿಕ್ಷಣ ನಿಕಾಯದ ಡೀನ್ ಪ್ರೊ. ಸಕ್ಪಾಲ್ ಹೂವಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅತಿಥಿ ಉಪನ್ಯಾಸಕಿ ವಾಣಿಶ್ರೀ ಕಿರಣಗಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದ ಸಂಯೋಜಕಿ ಡಾ. ಜಿ ಸೌಭಾಗ್ಯ, ಬೋಧಕ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಮಹಿಳಾ ಸಬಲೀಕರಣಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವ ಅವಶ್ಯಕ: ಪ್ರೊ. ಶಾಂತಾದೇವಿ

ವಿಜಯಪುರ: ಮಹಿಳಾ ಸಬಲೀಕರಣಕ್ಕೆ ಕೇವಲ ಪ್ರಮಾಣಪತ್ರವಷ್ಟೇ ಸಾಕಾಗದು, ವೈಜ್ಞಾನಿಕ ಜ್ಞಾನ ಮತ್ತು ತಂತ್ರಜ್ಞಾನ ಪ್ರಭಾವವೂ ಅವಶ್ಯಕ ಎಂದು ಮಹಿಳಾ ವಿವಿಯ ಹಂಗಾಮಿ ಕುಲಪತಿ ಪ್ರೊ. ಶಾಂತಾದೇವಿ ಟಿ ಹೇಳಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಹಾಗೂ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಹಾಗೂ ಕ್ರೀಡಾ ನಿರ್ದೇಶನಾಲಯ ಇವರ ಸಂಯುಕ್ತಾಶ್ರಯದಲ್ಲಿ ಮಹಿಳಾ ಸಾಂಸ್ಕೃತಿಕ ಹಬ್ಬದ–2025 ಪ್ರಯುಕ್ತ ಬುಧವಾರ ಬೆಳಿಗ್ಗೆ ಹಮ್ಮಿಕೊಂಡಿದ್ದ ಮ್ಯಾರಥಾನ್‌ಗೆ ಚಾಲನೆ ನೀಡಿ ಮಾತನಾಡಿದರು.

ಈ ಮ್ಯಾರಥಾನ್ ನಾಲ್ಕು ದಿಕ್ಕಿನಿಂದ ಆಯೋಜಿಸುವ ಉದ್ದೇಶವೆಂದರೆ ನಮ್ಮ ಮಹಿಳಾ ವಿಶ್ವವಿದ್ಯಾಲಯದ ಅಸ್ತಿತ್ವವನ್ನು ತಲುಪಿಸುವುದಾಗಿದೆ. ಮಹಿಳೆಯರ ಹಕ್ಕುಗಳಿಗೆ ಇನ್ನೂ ಮಹಿಳೆಯರೇ ಹೋರಾಡಬೇಕಾಗಿದೆ. ಎಷ್ಟೇ ಶಿಕ್ಷಣ ಪಡೆದರೂ ಮಹಿಳೆಯರ ಮೇಲೆ ದೌರ್ಜನ್ಯ ಕಡಿಮೆಯಾಗಿಲ್ಲ. ಮಹಿಳೆಯರು ವಿಶ್ವದ ಮುಂಚೂಣಿಯಲ್ಲಿ ತಲುಪಲು ಅವರಿಗೆ ಸಮಾನ ಅವಕಾಶಗಳನ್ನು ನೀಡಬೇಕಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮಹಿಳಾ ವಿವಿಯ ಸಿಂಡಿಕೇಟ್ ಸದಸ್ಯೆ ಮಲ್ಲಮ್ಮಾ ಯಾಳವಾರ ಮ್ಯಾರಥಾನ್‌ನಲ್ಲಿ ಮಾತನಾಡಿ, ವಿಜಯಪುರದ ಎಲ್ಲಾ ನಾಗರಿಕರಿಗೆ ಮಹಿಳೆಯರ ಹಕ್ಕುಗಳು ಮತ್ತು ಅವರ ಮಹತ್ವದ ಬಗ್ಗೆ ಜಾಗೃತಿಯನ್ನು ಉಂಟುಮಾಡಬೇಕು. ಮಹಿಳೆಯರಿಗೆ ಸಮಾನತೆಯ ನೋಟವುಳ್ಳ ಶಿಕ್ಷಣವನ್ನು ನೀಡುವುದು ಅವಶ್ಯಕ. ಮಹಿಳೆಯರು ತಮ್ಮ ಸ್ವಂತ ಬದುಕನ್ನು ಕಟ್ಟಿಕೊಳ್ಳುವುದರ ಜೊತೆಗೆ, ಸಮಾಜ ಮತ್ತು ದೇಶದ ನಿರ್ಮಾಣದಲ್ಲೂ ಪ್ರಮುಖ ಪಾತ್ರ ವಹಿಸಬೇಕು. ಈ ಕಾರಣಕ್ಕಾಗಿ, ಎಲ್ಲರೂ ಒಗ್ಗೂಡಿ ಮಹಿಳೆಯರನ್ನು ಸಬಲಗೊಳಿಸಲು ಕಾರ್ಯನಿರ್ವಹಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಮಹಿಳಾ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ ಮ್ಯಾರಥಾನ್‌ನಲ್ಲಿ ಮಾತನಾಡಿ, ಹೆಣ್ಣುಮಕ್ಕಳಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಅವರ ಹಕ್ಕುಗಳನ್ನು ದೊರಕಿಸುವುದು ಅತ್ಯಂತ ಮುಖ್ಯವಾಗಿದೆ. ಮಹಿಳೆಯರು ಶಕ್ತಿಯಾಗಲು, ಸ್ವಯಂ ನಿರ್ಧಾರ ತೆಗೆದುಕೊಳ್ಳಲು ಮತ್ತು ಸಮಾಜದಲ್ಲಿ ಗೌರವಯುತ ಜೀವನ ನಡೆಸಲು ಸಹಾಯ ಮಾಡಬೇಕು. ನಮ್ಮ ಸಮಾಜದಲ್ಲಿ ಮಹಿಳೆಯರ ಸುರಕ್ಷತೆ ಸವಾಲಾಗಿದರೂ, ಅವರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಭಿವೃದ್ಧಿ ಅತ್ಯವಶ್ಯಕವಾಗಿದೆ. ಇದನ್ನು ಸಾಧಿಸಲು ಸಮರ್ಥನೀಯ ನೀತಿಗಳು, ಮಕ್ಕಳ ಶಿಕ್ಷಣ ಮತ್ತು ಸಾಮಾಜಿಕ ಜಾಗೃತಿಯ ಅಗತ್ಯವಿದೆ ಎಂದರು.

ನಗರದ ಬಿ.ಎಲ್.ಡಿ.ಇ. ತಾಂತ್ರಿಕ ಮಹಾವಿದ್ಯಾಲಯ, ಗೋಳಗುಮ್ಮಟ, ಜಿಲ್ಲಾ ನ್ಯಾಯಾಲಯ ಹಾಗೂ ಸೈನಿಕ ಶಾಲೆ, ಹೀಗೆ ನಾಲ್ಕು ಕಡೆಗಳಿಂದ ಮ್ಯಾರಥಾನ್ ಹೊರಟು, ಗಾಂಧೀ ವೃತ್ತದ ಬಳಿ ಸಮಾರೋಪಗೊಂಡಿತು. ಈ ಮ್ಯಾರಥಾನ್‌ನಲ್ಲಿ ಮಹಿಳಾ ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ ಚಂದ್ರಶೇಖರ, ಮಹಿಳಾ ಸಾಂಸ್ಕೃತಿಕ ಹಬ್ಬದ ಸದಸ್ಯ ಸಂಚಾಲಕಿ ಪ್ರೊ. ಲಕ್ಷಿ ?ಮೀದೇವಿ ವೈ, ಸಂಯೋಜಕರಾದ ಪ್ರೊ.ಸಕ್ಪಾಲ್ ಹೂವಣ್ಣ, ಪ್ರೊ.ಜಿ.ಜಿ.ರಜಪೂತ, ಪ್ರೊ. ಶ್ರೀನಿವಾಸ, ಡಾ.ಜ್ಯೋತಿ ಅವಟಿ, ಪ್ರೊ.ಪಿ.ಜಿ.ತಡಸದ, ಪ್ರೊ ಜ್ಯೋತಿ ಉಪ್ಪಾದೆ, ಡಾ. ಕಸ್ತೂರಿ ರಜಪೂತ, ಪ್ರೊ. ರಾಜಕುಮಾರ ಪಿ ಮಾಲಿಪಾಟೀಲ್, ಡಾ. ಕಿರಣ ಜಿ. ಎನ್, ಪ್ರೊ.ನಾಮದೇವ. ಎಮ್. ಗೌಡ, ಪ್ರೊ.ಹನುಮಂತಯ್ಯ ಪೂಜಾರಿ ಹಾಗೂ ಪ್ರೊ.ವಿಜಯಾ ಕೋರಿಶೇಟ್ಟಿ, ಪ್ರೊ. ಯು.ಕೆ.ಕುಲಕರ್ಣಿ, ಡಾ.ಚಂದ್ರಶೇಖರ ಮಠಪತಿ, ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕ–ಬೋಧಕೇತರ ಸಿಬ್ಬಂದಿ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಶಿಕ್ಷಣ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ. ವಿಷ್ಣುಶಿಂದೆ ಸ್ವಾಗತಿಸಿ ನಿರೂಪಿಸಿದರು. ಕ್ರೀಡಾ ನಿರ್ದೇಶನಾಲಯದ ನಿರ್ದೇಶಕ ಹಾಗೂ ಕ್ರೀಡಾ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಹನುಮಂತಯ್ಯ ಪೂಜಾರ ವಂದಿಸಿದರು.

ಎಸ್.ಜಿ. ತೊನಶ್ಯಾಳರಿಗೆ ಸ್ನೇಹಶ್ರೀ ಕ್ರಿಯಾಚಿಂತಕ ಪ್ರಶಸ್ತಿ ಪ್ರದಾನ

ವಿಜಯಪುರ: ಅಖಿಲ ಕರ್ನಾಟಕ ಸ್ನೇಹ ಗಂಗಾವಾಹಿನಿ ಕಲಬುರ್ಗಿಯ ಸಂಸ್ಥಾಪಕ ಗೌರವಾಧ್ಯಕ್ಷರ 99ನೇ ಜನ್ಮ ದಿನಾಚರಣೆಯ ಅಂಗವಾಗಿ ನಗರದ ವಿಕಾಸ ಸ್ಕೂಲ್ ಸಭಾಭವನದಲ್ಲಿ ಪ್ರೊ.ಎಸ್.ಎಸ್.ಆಲಗೂರ ಮೆಮೊರಿಯಲ್ ಫೌಂಡೇಶನ ವತಿಯಿಂದ ಪ್ರತಿ ವರ್ಷ ಕೊಡಮಾಡುವ ಸ್ನೇಹಶ್ರೀ ಕ್ರಿಯಾಚಿಂತಕ ಪ್ರಶಸ್ತಿಯನ್ನು ಶ್ರೀ ಯಲಗೂರೇಶ್ವರ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ಜಿ. ತೊನಶ್ಯಾಳ ಅವರಿಗೆ ನೀಡಿ ಗೌರವಿಸಲಾಯಿತು.

ಗಂಗಾಮತ ಸಮಾಜದ ಬಡತನ, ಮೂಢನಂಬಿಕೆ, ಜನರ ವಿಚಾರಧಾರೆ ಬದಲಾವಣೆ ಮಾಡಬೇಕೆಂಬ ಪಣ ತೊಟ್ಟು ಮನೆ ಮನೆಗೆ ತೆರಳಿ ಪದವೀಧರರ ಪರಿಚಯ ಗ್ರಂಥ ಹೊರತರಲು ಪ್ರಯತ್ನಿಸಿದ ಪ್ರೊ. ಎಸ್.ಎಸ್. ಆಲಗೂರ ಅವರ ಶ್ರಮ ಇಂದಿಗೂ ಯಾರು ಪ್ರಶ್ನಿಸುವಂತಿಲ್ಲ. ಅವರ ನಿರ್ಭಿತ ನಡೆ, ನಿಷ್ಠುರ ನುಡಿ, ನ್ಯಾಯಯುತ ಧೋರಣೆ ವಿಚಾರಧಾರೆಗಳು ಆಕಾಶವಾಣಿಯಲ್ಲಿ ವಿಚಾರ ದೀಪಿಕೆ ಮಾಲಿಕೆಯಲ್ಲಿ ಬಿತ್ತರಗೊಳ್ಳುತ್ತಿದ್ದವು. ಕೇಶಿ ರಾಜನ ಶಬ್ದಮಣಿದರ್ಪಣ ಅನೇಕ ವಿದ್ಯಾರ್ಥಿಗಳಿಗೆ ಮನೆ ಪಾಠ ಮಾಡುತ್ತಿದ್ದರು. ಅವರ ಉದಾತ್ತಭಾವನೆ ತೀರಾ ವಿಭಿನ್ನವಾಗಿತ್ತು ಎಂದು ಪ್ರಾಚಾರ್ಯ ಯಲ್ಲಪ್ಪ ತಳವಾರ ಹೇಳಿದರು.

ಸಾಹಿತಿ ಸಂಗಮೇಶ ಬದಾಮಿ ಮಾತನಾಡಿ, ಗಂಗಾಮತ ಸಮಾಜದ ಸಾಂಸ್ಕೃತಿಕ ಅಭಿವೃದ್ಧಿ ಅವಶ್ಯಕತೆ ಇದ್ದ ಸಂದರ್ಭದಲ್ಲಿ ಕೇವಲ ಸಮಾಜದ ಪದವೀಧರ ಸದಸ್ಯರ ಪರಿಚಯಗ್ರಂಥವನ್ನು ಅಖಿಲ ಕರ್ನಾಟಕ ಸ್ನೇಹ ಗಂಗಾವಾಹಿನಿ ಸಂಸ್ಥೆಯನ್ನು ಸ್ಥಾಪಿಸಿ ಗೌರವಾಧ್ಯಕ್ಷರಾಗಿ ತಮ್ಮ ಜೀವನದುದ್ದಕ್ಕೂ ತನು–ಮನ–ಧನದಿಂದ ಸಮರ್ಪಿಸಿಕೊಂಡವರು. ಅಂಬಿಗರ ಚೌಡಯ್ಯನವರ ವಚನಗಳು ಎಲ್ಲ ಭಾಷೆಗಳಲ್ಲಿ ಭಾಷಾಂತರವಾಗಬೇಕು ಎಂದು ಬಯಸಿದವರು. ಪ್ರೊ.ಎಸ್.ಎಸ್. ಆಲಗೂರ ಅವರ ನಿಷ್ಕಲ್ಮಶ ಸೇವೆ, ಸ್ನೇಹಪರ ನಿಲುವು ಇಂದಿಗೂ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ ಎಂದರು.

ಕಲಬುರ್ಗಿಯ ನಿವೃತ್ತ ಅಧ್ಯಾಪಕ ಎಲ್.ಬಿ. ಹಿಟ್ಟಿನ ಅಧ್ಯಕ್ಷತೆ ವಹಿಸಿ ಮಾತನಾಡಿ, ಕರ್ನಾಟಕ ಸ್ನೇಹ ಗಂಗಾವಾಹಿನಿಯ ಪ್ರೊ. ಎಸ್.ಎಸ್. ಆಲಗೂರ ಅವರ ಜನ್ಮ ದಿನದ ಅಂಗವಾಗಿ ಪ್ರತಿ ವರ್ಷ ಒಬ್ಬ ಸಾಧಕರಿಗೆ ಸ್ನೇಹಶ್ರೀ ಪ್ರಶಸ್ತಿಯೊಂದಿಗೆ ರೂ.11,000 ಗೌರವ ಧನವನ್ನು ಪ್ರದಾನ ಮಾಡಲಾಗುತ್ತಿದೆ. ಇದುವರೆಗೂ 8 ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದರು.

ಸಾಹಿತಿ ಸಿದ್ದಣ್ಣ ಉತ್ನಾಳ ಉದ್ಘಾಟಿಸಿದರು. ಡಾ. ವೀಣಾ ಯರಗೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿ.ಎಂ. ಪಟ್ಟೆದಾರ, ಎಸ್.ಎಂ. ಕಣಬೂರ, ಶಿವಲಿಂಗಪ್ಪ ಮಸರಬೊ, ನೀಲಕಂಠ ಜಮಾದಾರ, ಸಿದ್ದಪ್ಪ ಮಾಗಾಂವ, ವಿ.ಎಸ್. ಆಲಗೂರ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ನ್ಯಾಯವಾದಿ ಕೆ.ಎಫ್. ಅಂಕಲಗಿ, ಬಾಗಲಕೋಟೆಯ ಡಾ. ಪ್ರಲ್ಹಾದ ಭೋವಿ, ತಾಳಿಕೋಟೆಯ ಬಸವರಾಜ ನಾಯ್ಕೋಡಿ, ಚಂದ್ರಶೇಖರ ಮುಗೇರ ಅವರನ್ನು ಸತ್ಕರಿಸಲಾಯಿತು.

ಸಾಹೇಬಗೌಡ ಬಿರಾದಾರ ಸ್ವಾಗತಿಸಿದರು. ಎಂ.ವಾಯ್. ಜಾಯವಾಡಗಿ, ಭರತ ಕೋಳಿ, ಶಂಕರ ನಾಟೀಕಾರ, ಬಿ.ಆರ್. ಗೋಕಾವಿ, ಪ್ರಸನ್ನ ಗೋಟೂರ, ಶಶಾಂತ ಗಣಪೂರ, ಆರ್.ಕೆ. ಐಶ್ವರ್ಯ, ವಿರಾಜ ಯರಗೋಳ, ಅಭಿಷೇಕ ಆಲಗೂರ, ಗಣೇಶ ಹೆಬ್ಬಾಳ, ಅಮಿತ ನಾಮದಾರ, ಪ್ರಭುರಾಜ ಹೆಬ್ಬಾಳ, ಸಂಬ್ರಮ ಮುನಿ ಪಾಲ್ಗೊಂಡಿದ್ದರು. ನ್ಯಾಯವಾದಿ ಬಸವರಾಜ ಯರಗೋಳ, ಸಂಗಮೇಶ ಮಾಗಿ ವಂದಿಸಿದರು. ಕಾರ್ಯಕ್ರಮದಲ್ಲಿ ಸಮಾಜದ ಎಲ್ಲ ಬಾಂಧವರು ಭಾಗವಹಿಸಿದ್ದರು.

ಗ್ರಾಮೀಣ ದಲಿತರಿಗೆ ನಿವೇಶನ, ಮೂಲಭೂತ ಸೌಕರ್ಯ ಕಲ್ಪಿಸಲು ಆಗ್ರಹಿಸಿ ಪ್ರತಿಭಟನೆ

ವಿಜಯಪುರ: ಜಿಲೆಯ ವಿವಿಧ ತಾಲೂಕಿನ ಗ್ರಾಮದಲ್ಲಿ ವಾಸಿಸುತ್ತಿರುವ ದಲಿತ ಜನಾಂಗದವರಿಗೆ ಆಶ್ರಯ ಯೋಜನೆ ಅಡಿಯಲ್ಲಿ ನಿವೇಶನ ಹಂಚಿಕೆ ಹಾಗೂ ದಲಿತರ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯದಲಿತ ಸಂಘರ್ಷ ಸಮಿತಿ (ರಿ) ಸಂಯೋಜಕ ಜಿಲ್ಲಾ ಸಮಿತಿ ವತಿಯಿಂದ ಬೃಹತ್ ಪ್ರತಿಭಟನೆ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಎದುರಿಗೆ ಪ್ರತಿಭಟನೆ ನಡೆಸಲಾಯಿತು. ನಗರದ ಡಾ. ಅಂಬೇಡ್ಕರ ವೃತ್ತದಿಂದ ಬೃಹತ್ ಪ್ರತಿಭಟನೆ? ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಕೆಲ ಹೊತ್ತು ಪ್ರತಿಭಟನೆ ಮಾಡಲಾಯಿತು. ಅನಂತರ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮೀತಿ (ರಿ) ಸಂಯೋಜಕ ಸಂಘಟನೆ ರಾಜ್ಯ ಸಂಚಾಲಕ ಎನ್. ಶಂಕರ್ ಮಾತನಾಡಿ, ಸ್ವತಂತ್ರ ಮತ್ತು ಸಂವಿಧಾನ ಜಾರಿಗೆಯಾಗಿ 7 ದಶಕಗಳು ಕಳೆದರೂ ಸಹ ಹೋರಾಟದ ಮೂಲಕ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಇಂತಹ ಸಂದರ್ಭದಲ್ಲಿ ದಲಿತರ ಜನಾಂಗದ ಮೂಲ ಹಕ್ಕುಗಳಾದ ವಸತಿ, ಭೂಮಿ ಹಾಗೂ ಸ್ಮಶಾನಗಳ ವ್ಯವಸ್ಥೆ ಕಲ್ಪಿಸಬೇಕು ಎಂದು ಅವರು ಹೇಳಿದರು.

ಸಂವಿಧಾನದತ್ತ ಹಕ್ಕು ಈಡೇರಿಸಲು ಸಂಘಟನೆ ಪದಧಿಕಾರಿಗಳ ಜೊತೆ ಅಧಿಕಾರಿಗಳ ಸಮ್ಮುಖದಲ್ಲಿ ತುರ್ತಾಗಿ ಸಭೆ ಕರೆದು ನಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು. ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಸಂಯೋಜಕ ಜಿಲ್ಲಾ ಸಂಚಾಲಕ ನಾಗೇಶ ತಳವಾರ ಮಾತನಾಡಿ, ದಲಿತರಿಗೆ ಮೂಲಭೂತ ಹಕ್ಕುಗಳನ್ನು ಒದಗಿಸಿ ಕೊಡುವುದು ಮತ್ತು ಜಾತಿ ಪದ್ಧತಿ ನಿರ್ಮೂಲನೆಗೊಳಿಸುವುದು. ವಿಜಯಪುರ ಮತ್ತು ಬಸವನ ಬಾಗೇವಾಡಿ ಪೋಲಿಸ್ ಠಾಣೆಯವರು ದಲಿತರ ಕುಂದುಕೊರತೆ ಸಭೆಯನ್ನು ನಡೆಸಿ ದಲಿತರ ಸಮಸ್ಯೆಗಳನ್ನು ಆಲಿಸಿ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕಮಲಾ ಬಿಸನಾಳ, ಶಿವರಾಯ ಮಾದರ, ಅಪ್ಪು ಹಾದಿಮನಿ, ಪವಾಡಪ್ಪ ಚಲವಾದಿ, ಆಕಾಶ ಮನಗೂಳಿ, ಮುದಕಣ್ಣ ದಿಂಡವಾರ, ಸಿದ್ರಾಮ ಹಾದಿಮನಿ, ಲಕ್ಷ್ಮಿಬಾಯಿ ಹೆರಕಲ್, ಹನಮಂತ ಹೊಸಮನಿ, ಚೌಡಪ್ಪ ಕಡಕೋಳ, ಕಾಲಪ್ಪ ಬೂದಿಹಾಳ, ರೂಪಾ ಯರನಾಳ, ಕಾವೇರಿ ಮಾದರ ಮತ್ತಿತರ ಪ್ರಮುಖರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ತೆಲಂಗಾಣಕ್ಕೆ ಆಲಮಟ್ಟಿ ಡ್ಯಾಮ್‌ನಿಂದ ನೀರು: ಸಿಎಂ, ಡಿಸಿಎಂ ಅಣುಕು ಪಿಂಡ ಪ್ರದಾನ

ವಿಜಯಪುರ: ಆಲಮಟ್ಟಿ ಹಾಗೂ ಬಸವಸಾಗರ ಅಣೆಕಟ್ಟೆಯಿಂದ ತೆಲಂಗಾಣಕ್ಕೆ ಕರ್ನಾಟಕ ಸರ್ಕಾರ ನೀರು ಹರಿಬಿಟ್ಟಿರುವುದನ್ನು ವಿರೋಧಿಸಿ ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಆಲಮಟ್ಟಿ ಬಳಿ ಕೃಷ್ಣಾ ನದಿ ತಟದಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ ಅವರ ಶ್ರಾದ್ಧ ಕಾರ್ಯಕ್ರಮ ನೆರವೇರಿಸಿ ನದಿಯಲ್ಲಿ ಅವರಿಬ್ಬರ ಅಣುಕು ಪಿಂಡ ಪ್ರದಾನ ಮಾಡಿದರು.

ಕುಡಿಯಲು ಹಾಗೂ ಕೃಷಿಗೆ 5 ಟಿಎಂಸಿ ನೀರು ಬಿಡುವಂತೆ ತೆಲಂಗಾಣ ಸರ್ಕಾರ ಕರ್ನಾಟಕಕ್ಕೆ ಕೇಳಿತ್ತು. ಇದಕ್ಕೆ ಈ ಭಾಗದ ರೈತರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ರೈತರ ವಿರೋಧದ ಮಧ್ಯೆಯೂ ಫೆಬ್ರವರಿ 17 ರಿಂದಲೇ ತೆಲಂಗಾಣಕ್ಕೆ 10 ಟಿಎಂಸಿ ನೀರು ಅಕ್ರಮವಾಗಿ ಕದ್ದು ಬಿಟ್ಟಿದ್ದಾರೆ.

ಅಧಿಕಾರಿಗಳು 1.27

ಶ್ರೀ ಮಡಿವಾಳ ಮಾಚಿದೇವ ಜಯಂತಿ

ಮಡಿವಾಳ ಮಾಚಿದೇವರ ತತ್ವ ಸಂದೇಶಗಳನ್ನ ಜೀವನದಲ್ಲಿ ಅಳವಡಿಸಿಕೋಳ್ಳಿ: ಅಮ್ಜದ್ ಪಟೇಲ್

ಕೊಪ್ಪಳ : ಮಡಿವಾಳ ಸಮಾಜವು ಉನ್ನತ ಮಟ್ಟದ ಸ್ಥಾನ ತಲುಪಬೇಕಾದರೆ, ಶ್ರೀ ಮಡಿವಾಳ ಮಾಚಿದೇವರು ಹಾಕಿ ಕೊಟ್ಟಿರುವ ತತ್ವ ಸಂದೇಶಗಳನ್ನು ಜೀವನದಲ್ಲಿ ಅಳವಡಿಕೆ ಮಾಡಿಕೊಂಡಾಗ ಮಾತ್ರ ಸಾಧ್ಯವಾಗಿದೆ ಎಂದು ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ ಪಟೇಲ್ ಹೇಳಿದರು.

ಅವರು ಬುಧವಾರ ಕೊಪ್ಪಳ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆಕೊಪ್ಪಳಇವರಸಂಯುಕ್ತಾಶ್ರಯದಲ್ಲಿ ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ಶ್ರೀ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಡಿವಾಳ ಮಾಚಿದೇವ ರವರು 12ನೇ ಶತಮಾನದಲ್ಲಿ ಬಿಜಾಪುರ ಜಿಲೆಯ ಸಿಂಧಗಿ ತಾಲೂಕಿನ ದೇವರ ಹಿಪ್ಪರಗಿಯಲ್ಲಿ' ಪರುವತಯ್ಯ ಮತ್ತು ಸುಜ್ಞಾನವ್ವ ದಂಪತಿಗಳ ಪುತ್ರ ರತ್ನ –ಶರಣ ಕಿರಣನಾಗಿ ಜನಿಸಿದರು. ಮಡಿವಾಳ ಮಾಚಿದೇವ ಕನ್ನಡದ ಶಿವಶರಣರಲ್ಲಿಯೆ ಅತ್ಯಂತ ಹಿರಿಯರು. ಬಸವಣ್ಣನವರು ಕಾಲ್ಯಾಣದಲ್ಲಿ ಅನುಭವ ಮಂಟಪ ಕಟ್ಟುವಲ್ಲಿ ಮಡಿವಾಳ ಮಾಚಿದೇವರ ಕಾಯಕ ಅತಿ ಮಹತ್ವದ್ದು. ದೇಶದ ನಾನಾ ಭಾಗಗಳಿಂದಕಲ್ಯಾಣಕ್ಕೆಬರುವವರಿಗೆಪರೀಕ್ಷಿಸಿ, ಸ್ವಾಗತಿಸುವ ಕೆಲಸ ಅವರದಾಗಿತ್ತು. ಅವರು ಕೇವಲ ಬಟ್ಟೆಯ ಮೇಲೆನಿ ಮೈಲಿಗೆಯನ್ನ ತೋಳೆಯದೇ, ಅದ್ಭುತ ವಚನಗಳ ಮೂಲಕ ಮನಸ್ಸಿಗೆ ಅಂಟಿಕೊಂಡಿರುವ ಕೋಳೆಯನ್ನ ತೋಳೆಯು ಕಾಯಕ ಮಾಡಿದರು. ಅವರು ರಚಿಸಿರುವ ವಚನಗಳಲ್ಲಿ 300 ವಚನಗಳು ದೊರಕಿವೆ ಎಂದರು.

ಮಡಿವಾಳ ಸಮಾಜದವರು ಎಲ್ಲಾ ಸಮಾಜದ ಭಾಂಧವರೊಂದಿಗೆ ಉತ್ತಮ ಸಂಬಂಧದೊಂದಿಗೆ ಇತರರ ಹಲವಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ. ಎಲ್ಲರೂ ಆರ್ಥಿಕವಾಗಿ ಸಬಲರಾಗಬೇಕಾದರೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ನಗರಸಭೆ ವತಿಯಿಂದ ತಮ್ಮ ಯಾವುದೇ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಳ ಕುರಿತು ಮನವಿ ಇದ್ದಲ್ಲಿ ನಾನು ಅದನ್ನ ಸ್ವೀಕರಿಸಿ ಅನುದಾನವನ್ನು ಬಿಡುಗಡೆ ಮಾಡುತ್ತೆನೆ. ತಮಗೆಲ್ಲರಿಗೂ ಮಡಿವಾಳ ಮಾಚಿದೇವ ಜಯಂತಿ ಶುಭಾಶಯಗಳು ಎಂದು ಹೇಳಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಚಿತ್ರದುರ್ಗ ಸಂಸ್ಥಾನ ಮಠದ ಶ್ರೀ ಜಗದ್ಗುರು ಡಾ. ಬಸವ ಮಾಚಿದೇವ ಸ್ವಾಮಿಜಿ ಅವರು

ಮಾತನಾಡಿ, ಕಾಯಕ ಮತ್ತು ವಿಶಿಷ್ಟ ವಚನಗಳ ಮೂಲಕ ಸಮಾಜ ತಿದ್ದುವ ಕಾರ್ಯ ಮಾಡುವುದರ ಮೂಲಕ ಕಾಯಕ ಯೋಗಿ ಎನಿಸಿಕೊಂಡವರು ಶ್ರೀ ಮಡಿವಾಳ ಮಾಚಿದೇವರು. ಅವರ ಬದುಕಿನ ಚಿಂತನೆಗಳನ್ನು ನಾವು ತಿಳಿದುಕೊಳ್ಳಬೇಕು ಮತ್ತು ಇತರರಿಗೂ ತಿಳಿಸಬೇಕು. ಮಡಿವಾಳ ಮಾಚಿದೇವ ಅವರು ತಮ್ಮ ಕಾಯಕ ಮತ್ತು ವಚನಗಳ ಮೂಲಕ, ಸಮಸ್ತ ಮಾನವ ಕುಲಕ್ಕೆ ಆದರ್ಶವಾಗಿದ್ದಾರೆ. ಅದಕ್ಕೆ ಒಂದು ನಿದರ್ಶನ ಎಂದರೆ ಇವತ್ತು ಮೆರವಣಿಗೆ ಸಮಯದಲ್ಲಿ ಮುಸ್ಲಿಂ ಸಮುದಾಯದ ಯುವಕರು, ಕುಂಬ ಹೊತ್ತ ಹೆಣ್ಣು ಮಕ್ಕಳಿಗೆ ನೀರು ಮತ್ತು ಮಜ್ಜಿಗೆ ಕೊಡುತ್ತಿರುವ ದೃಶ್ಯ ಸಾಕಲ್ಲವೆ. ಮಡಿವಾಳ ಮಾಚಿದೇವರ ತತ್ವ ವಿಶ್ವಕ್ಕೆ ಸಾರುವಂತದ್ದು ಎಂದರು.

ಅನೇಕ ಶರಣರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಬೆಳಕನ್ನು ನೀಡಿದ್ದಾರೆ. ಅಂತಹ ಮಹನೀಯರುಗಳಲ್ಲಿ ಬಸವಣ್ಣನವರ ಅನುಭವಮಂಟಪದಲ್ಲಿವಿಶಿಷ್ಟವಚನಕಾರರಾಗಿ ರೂಪುಗೊಂಡವರು ಮಹಾನ್ ಶರಣ ಶ್ರೀ ಮಡಿವಾಳ ಮಾಚಿದೇವರು.

ಜಯಂತಿ ಆಚರಣೆಯ ಜೊತೆಗೆ, ಅವರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜಯಂತಿ ಆಚರಣೆಯಿಂದ ನಮ್ಮ ಜೀವನ ಶೈಲಿಯನ್ನು ಬದಾಲಿಸಿಕೋಳ್ಳುವುದು ಅತ್ಯವಶ್ಯಕವಾಗಿದೆ ಎಂದು ಹೇಳಿದರು.

ಕೊಪ್ಪಳ ಸರ್ಕಾರಿ ಪ್ರಥಮ ದರ್ಜೆಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.ನವೀನ್ ಕುಮಾರ್ ಬಿ. ಅವರು ಶ್ರೀ ಮಡಿವಾಳ ಮಾಚಿದೇವರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಮಡಿವಾಳ ಸಮಾಜದ ಪ್ರಮುಖಕರಾದ ಯೋಗೇಶ್ ಮಡಿವಾಳರ ಹಿಟ್ನಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ, ನಗರಾಭಿವೃದ್ಧಿ ಪ್ರಾಧಿಕಾರದ ಕೊಪ್ಪಳ ನಗರಸಭೆ ಸ್ತಾಯಿ ಸಮಿತಿ ಅಧ್ಯಕ್ಷರಾದ ಅಕ್ಬರಪಾಶ ಪಲ್ಟನ್, ನಗರ ಸಭೆ ಸದಸ್ಯರಾದ ಅಜೀಮುದ್ದಿನ್ ಅತ್ತಾರ್, ಅರುಣ್ ಶೆಟ್ಟಿ, ಮಾಜಿ ಅಧ್ಯಕ್ಷ ಮಹಾಂತೇಶ ಪಾಟೀಲ್ ಮೈನಳ್ಳಿ, ಉದ್ಯಮಿ ಸೋಮಶೇಖರ್ ಹಿಟ್ನಾಳ್, ಸಲಿಮ್ ಅಳವಂಡಿ ಹಾಗೂ ಮಡಿವಾಳ ಸಮಾಜದ ಮುಖಂಡರಾದ ಕೃಷ್ಣ ಎಸ್. ಮಡಿವಾಳ ಸಮಾಜದ ಎಮ್.ಕೆ.ಹನುಮಂತಪ್ಪ, ಶಂಕ್ರಪ್ಪ ಹಾಲ್ಕೆರಿ, ರಾಮಣ್ಣ ಮಡಿವಾಳರ, ಬಸವರಾಜ ಬೆಳಗಲಿ, ದುರಗೇಶ ಮಡಿವಾಳರ, ಹುಲಗಪ್ಪ ಜಿ. ಮಡಿವಾಳರ, ಡಾ. ಸಂಗಮೇಶ ಕಲಹಾಳ, ಮಂಜುಳಾ ಮಲ್ಲಿಕಾರ್ಜುನ ಮಡಿವಾಳರ, ಕನಕಪ್ಪ ಹೋನ್ನಪ್ಪ ಮಡಿವಾಳರ, ಶಂಕ್ರಪ್ಪ ಮಡಿವಾಳರ, ಯಮನೂರಪ್ಪ ಬುಡ್ಡಪ್ಪ ಮಡಿವಾಳರ ಹಾಗೂ ಮತ್ತಿತರರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಅದ್ದೂರಿ ಮೇರವಣಿಗೆ: ಶ್ರೀ ಮಡಿವಾಳ ಮಾಚಿದೇವ ಜಯಂತಿ ನಿಮಿತ್ತ ಮಡಿವಾಳ ಮಾಚಿದೇವ ಭಾವಚಿತ್ರದ ಮೆರವಣಿಗೆಗೆ ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ ಅವರು ಚಾಲನೆ ನೀಡಿದರು.

ಮೆರವಣಿಗೆಯು ನಗರದ ಕೋಟೆ ರಸ್ತೆಯ ಶ್ರೀ ಅಕ್ಕಮಹಾದೇವಿ ದೇವಾಲಯದಿಂದ ಪ್ರಾರಂಭಗೊಂಡು, ಗಡಿಯಾರ ಕಂಬ, ಜವಾಹರ ರಸ್ತೆ ಮೂಲಕ ಅಶೋಕ ಸರ್ಕಲ್ ಬಳಿಯಸಾಹಿತ್ಯಭವನದವರೆಗೆಅದ್ದೂರಿಯಾಗಿ ನಡೆಯಿತು.ಈಮೆರವಣಿಗೆಯಲ್ಲಿಮಹಿಳೆಯರು ತಲೆಯ ಮೇಲೆ ಕುಂಭ ಹೊತ್ತು ಸರತಿ ಸಾಲಿನಲ್ಲಿ ನಡೆಯುತ್ತಿರುವುದು ವಿಶೇಷವಾಗಿತ್ತು. ಮಡಿವಾಳ ಸಮಾಜದವರು ಸೇರಿದಂತೆ ಹಲವಾರು ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಬೇಸಿಗೆ ಸಮಯದಲ್ಲಿ ಆರೋಗ್ಯದ ಬಗ್ಗೆ ಮುಂಜಾಗ್ರತೆ ವಹಿಸಿ: ಡಾ. ಲಿಂಗರಾಜು

ಕೊಪ್ಪಳ : ಜಿಲ್ಲೆಯಾದ್ಯಂತ ಪ್ರಸಕ್ತ ತಿಂಗಳಿನ ಬಿಸಿಲಿನ ಪ್ರಕರತೆ ಮತ್ತು ತೀರ್ವತೆ ಕಂಡುಬಂದ ಹಿನ್ನೆಲೆಯಲ್ಲಿಸಾರ್ವಜನಿಕರು,ಗರ್ಭಿಣಿಯರು, ಬಾಣತಿಯರು, ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಲಿಂಗರಾಜು ಟಿ. ಅವರು ತಿಳಿಸಿದ್ದಾರೆ.

ಮುಂಜಾಗ್ರತ ಕ್ರಮಗಳು: ಬಿಸಿಯಾದ ಗಾಳಿ, ಶಾಕ ತರಂಗ (Heat wave) ದ ಸಂದರ್ಭಗಳಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳಲು ಪಾಲಿಸಬೇಕಾದ ಮುಂಜಾಗ್ರತ ಕ್ರಮಗಳು ಇಂತಿವೆ. ಹೆಚ್ಚು ನೀರನ್ನು ಕುಡಿಯಿರಿ, ಮಜ್ಜಿಗೆ, ಎಳನೀರು, ಹಣ್ಣಿನ ರಸಗಳನ್ನು ಹೆಚ್ಚಾಗಿ ಸೇವಿಸಬಹುದು. ನೀರಿನ ಅಂಶ ಹೆಚ್ಚಾಗಿರುವ ತರಕಾರಿಗಳು ಹಾಗೂ ಹಣ್ಣುಗಳನ್ನು ಸೇವಿಸುವುದು ಉತ್ತಮ. ಸಡಿಲವಾದ ತೆಳುಬಣ್ಣದ ಹತ್ತಿಯ ಬಟ್ಟೆಗಳನ್ನು ಧರಿಸಿರಿ. ಗಾಳಿಯಾಡುವ ಪಾದರಕ್ಷೆಯನ್ನು ಧರಿಸಿರಿ. ಹೊರಗಡೆ ತೆರಳುವ ವೇಳೆ ತಂಪು ಕನ್ನಡಕ, ಛತ್ರಿ, ಟವೆಲ್ ಅಥವಾ ಬಿಸಿಲಿನಿಂದ ಕಾಪಾಡಿಕೊಳ್ಳವ ಸಾಮಾನ್ಯ ಕ್ರಮಗಳನ್ನು

ಪಾಲಿಸಿ.

ರೇಡಿಯೋ, ದೂರದರ್ಶನ ಹಾಗೂ ದಿನಪತ್ರಿಕೆಗಳಲ್ಲಿ ಬಿಸಿಯಾದ ಗಾಳಿ, ಶಾಖ ತರಂಗದ ಬಗ್ಗೆ ನೀಡುವ ಮಾಹಿತಿ ಅನುಸಾರ ದೈನಂದಿನ ಚಟುವಟಿಕೆಗಳನ್ನು ಯೋಚಿಸಿಕೊಳ್ಳಿ.

ಬಿಸಿಲಿನಲ್ಲಿ ಹೊರಗಡೆ ಕಾರ್ಯನಿರ್ವಹಿಸುವವರು (ಜಮೀನಿನ ಕೆಲಸ, ರಸ್ತೆ ಕಾಮಗಾರಿ ಮುಂತಾದವುಗಳು) ಆದಷ್ಟು ಬೆಳಗ್ಗೆ 11 ಗಂಟೆಯ ಒಳಗೆ ಮತ್ತು ಸಂಜೆ 4 ಗಂಟೆಯ ನಂತರ ಕೈಗೊಳ್ಳುವುದು ಉತ್ತಮ. ಬಿಸಿಲು ಹೆಚ್ಚಿರುವ ಅವಧಿಯಲ್ಲಿ ಶ್ರಮದಾಯಕ ಕೆಲಸಗಳಿಂದ ವಿಶ್ರಾಂತಿ ಪಡೆಯಿರಿ. ಬಿಸಿಲಿನಲ್ಲಿ ನಡೆಯುವಾಗ ಕಡ್ಡಾಯವಾಗಿ ಚಪ್ಪಲಿ ಧರಿಸಿ. ಟಿ, ಕಾಫಿ ಹೆಚ್ಚು ಸಕ್ಕರೆ ಅಂಶ ಹೊಂದಿರುವ ಕಾರ್ಬೋನೇಟೆಡ್ ಪಾನಿಯ ಹಾಗೂ ಮಧ್ಯಪಾನದಿಂದ ದೂರವಿರಿ. ವ್ಯಕ್ತಿ ತೊದಲು ಮಾತು ಅಥವಾ ಅರ್ಥ ರಹಿತವಾಗಿ ಬಡಬಡಿಸಿದ್ದಲ್ಲಿ ಕೂಡಲೆ ನೆರಳಿನ ಸ್ಥಳಕ್ಕೆ ಸ್ಥಳಾಂತರಿಸಿ. ಕೆಳಗೆ ಮಲಗಿಸಿ ಕಾಲುಗಳನ್ನು ಮೇಲಕ್ಕೆ ಎತ್ತಿ ವಿಶ್ರಾಂತಿ ಪಡೆಯಬೇಕು.

ಬಿಸಿಗಾಳಿಮತ್ತುಅತೀಯಾದತಾಪಮಾನದಿಂದ ಆರೋಗ್ಯಸಮಸ್ಯೆಗಳುಉಂಟಾದಲ್ಲಿಸಮೀಪದ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಿ, 108 ಅಥವಾ 102ಕ್ಕೆ ಕರೆ ಮಾಡಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಶರಣರ ಜೀವನ ಮನು ಕುಲಕ್ಕೆ ಮಾದರಿ: ಕಾಡೇಶ ಐಹೊಳೆ

ರಾಯಬಾಗ : ನಮ್ಮ ದೇಶದಲ್ಲಿ ಇಂದು ಭ್ರಷ್ಟತೆ, ಜಾತಿಹೀನತೆ, ಹೆಚ್ಚುತ್ತಿರುವ ಸಂದರ್ಭದಲ್ಲಿ ಶರಣರು ನಡೆದು – ನುಡಿದು ತೋರಿದ ಜೀವನ ಮನುಕುಲಕ್ಕೆ ಮಾದರಿ ಆಗಿದೆ ಎಂದು ಕಾಡೇಶ ಐಹೊಳೆ ಹೇಳಿದರು.

ಅವರು ಡಾ.ಫ.ಗು.ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್ ಅಡಿಯಲ್ಲಿ ಶರಣ ಚೇತನ ಬಳಗ ಹಮ್ಮಿಕೊಂಡ ತಿಂಗಳ ಆಧ್ಯಾತ್ಮಿಕ ದಾಸೋಹ ಕಾರ್ಯಕ್ರಮದಲ್ಲಿ ಶರಣ ಜೀವನ ಪರಿಕಲ್ಪನೆ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

12 ನೇ ಶತಮಾನದಲ್ಲಿ ಬಸವಾದಿ ಶರಣರ ಜೀವನ ಮೌಲ್ಯಗಳು ಮತ್ತು ವಚನಗಳಲ್ಲಿ ಅವರು ಕಲ್ಪಿಸಿಕೊಟ್ಟ ತತ್ವಗಳು, ಎಂದೆಂದಿಗೂ ಮನುಕುಲಕ್ಕೆ ಮಾದರಿಯಾಗಿವೆ ಎಂದು ಅಭಿಪ್ರಾಯಪಟ್ಟರು.

ಅತಿಥಿಗಳಾಗಿ ಪಾಲ್ಗೊಂಡ ಕಲಗೌಡ ಪಾಟೀಲ್ ಡಾ.ಗಾಯತ್ರಿ ಬಾನೆ, ಪುಷ್ಪಾ ಹೊಸೂರ, ಕಮಲಾಕ್ಷಿ ಹಿರೇಮಠ ಅವರು ಅಧ್ಯಾತ್ಮ ಕಾರ್ಯಕ್ರಮಗಳ ಪ್ರಸ್ತುತ ಕುರಿತು ಚರ್ಚಿಸಿದರು.

ಡಾ.ಫ.ಗು.ಹಳಕಟ್ಟಿರಾಷ್ಟ್ರೀಯಟ್ರಸ್ಟ್‌ಅಧ್ಯಕ್ಷರಾದ

ಡಾ. ಬಿ.ಎಮ್ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ 'ಶರಣು – ಶರಣಾರ್ಥಿಗಳು' ಈ ಎರಡು ಶರಣರು ಬಳಸಿದ ಶಬ್ದಗಳು ನಮ್ಮ ನಾಡಿನಲ್ಲಿ ಕಲ್ಯಾಣ ಸಾಮ್ರಾಜ್ಯ ಕಟ್ಟಿವೆ ಎಂದು ಹೇಳಿದರು.

ಪ್ರೊ.ಎಂ.ಕೆ ಗುರವ,ಪ್ರಾಚಾರ್ಯರಾದ ಪಿ.ಬಿ.ಮುನ್ಯಾಳ,ಅಶೋಕ ದೇಶಿಂಗೆ,ಎ. ಎಸ್ .ಮುಗಳಖೋಡ,ಶಿವಪುತ್ರ ಅಮರಶೆಟ್ಟಿ,ಮಲ್ಲೇಶ ದೊಡಮನಿ,ಸುರೇಖಾ ಬೆಳಕೂಡ,ಸುಭದ್ರಾ ಕಸ್ತಿಗಾರ,ಸೀಮಾ ಹಿರೇಮಠ,ಸುಮಾ ಮಾಳಿ ,ಜಯಶ್ರೀ ಪಾಟೀಲ,ಶಿಲ್ಪಶ್ರೀ ದೊಡವಾಡ, ಶ್ರೀಧರ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

ಆರಂಭದಲ್ಲಿ ಅರಣ್ಯ ಅಧಿಕಾರಿ ಗಂಗಾಧರ ಸರಿಕರ ಪ್ರಾರ್ಥನೆ ಪ್ರಸ್ತುತಪಡಿಸಿದ್ದರು.

ಪಾವಣಿ ಮತ್ತು ಶಾಂಭವಿ ದೊಡವಾಡ ವಚನಗೀತೆ ಪ್ರಸ್ತುತಪಡಿಸಿದ್ದರು.

ನಿವೃತ್ತ ಶಿಕ್ಷಣ ಅಧಿಕಾರಿ ಎಚ್. ಎ. ಭಜಂತ್ರಿ ಸ್ವಾಗತಿಸಿದರು.

ಸಾತಪ್ಪ ಚೌಗಲೆ ಕಾರ್ಯಕ್ರಮ ನಿರೂಪಿಸಿದರು.

ಪ್ರೊ.ಹನುಮಂತ ಟಕ್ಕನವರ ಶರಣು ಸಮರ್ಪಣೆ ಹೇಳಿದರು.

ಸ್ತ್ರೀ ಎಂದರೆ ಅಷ್ಟೇ ಸಾಕೆ?

ಜಗತ್ತಿನ ಸೃಷ್ಟಿಯ ಪ್ರತಿ ಕಣಕಣದಲ್ಲೂ ಅವಳ ಛಾಪಿದೆ. ಅವಳಿಲ್ಲದ ಪ್ರಕೃತಿ ಬರಡು, ನದಿ ಬಂಜರು, ಗಾಳಿ ಪ್ರದೂಷಿತ. ಆದರೂ ಅವಳೆಂದರೆ ಪುರಸ್ಕಾರವಿಲ್ಲದ ತಿರಸ್ಕಾರ, ಆದ್ಯತೆಯಿಲ್ಲದ ಅವಸ್ಥೆ. ಅವಳಿಲ್ಲದ ಜಗವು ಸಾಂಗವಾಗಿ ನಡೆಯಬಹುದೇ?

ದೋಷಗಳನ್ನು ಕಳೆಯುವ ಪವಿತ್ರ ಗಂಗೆಯಾಗಿ, ಪರಿಶುದ್ಧ ಕಾವೇರಿಯಾಗಿ, ತುಂಗೆ, ಯಮುನೆ, ಗೋದಾವರಿ, ಹೇಮಾವತಿ, ನೇತ್ರಾವತಿ, ಶರಾವತಿ, ವೇದಾವತಿ, ಅರ್ಕಾವತಿ, ಸರಸ್ವತೀ, ಭಾಗೀರಥಿ, ನರ್ಮದಾ, ಸೌಪರ್ಣಿಕಾ, ಗೌತಮಿ, ಕಪಿಲೆ, ಮಂದಾಕಿನಿಯಾಗಿ ದಣಿದ ಜೀವಗಳಿಗೆ ದಾಹವನ್ನು ನೀಗಿಸುವ ನೀರಾಗಿ, ಬರಡು ಭೂಮಿಗೆ ಜೀವ ಚೈತನ್ಯವಾಗುವ ನೀರು ಹೆಣ್ಣಲ್ಲವೇ?

ದೇವರಿಗೆ ಅರ್ಪಿಸುವ ಸುಮ ಪುಷ್ಪ, ಅರ್ಚನಾ, ದೀಪ, ಪೂಜಾ, ಆರತಿ, ಆರಾಧನಾ ಕೊನೆಗೆ ವಂದನೆಯು ಹೆಣ್ಣಲ್ಲವೇ? ಮಂತ್ರ ಪಠಣದಲ್ಲಿ ಗಾಯತ್ರಿಯಾಗಿ,

ಗ್ರಂಥ ಪಠಣದಲ್ಲಿ ಗೀತೆಯಾಗಿರುವಳು ಹೆಣ್ಣಲ್ಲವೇ?

ಉಷೆಯಾಗಿ ನಿಶೆಯಾಗಿ, ಋತುವಾಗಿ, ಅವನಿಯಾಗಿ, ಅನ್ನಪೂರ್ಣೇಶ್ವರಿಯಾಗಿ, ಸುಹಾಸಿನಿ, ಸುಭಾಷಿಣಿಯಾಗಿ, ತಾಯಿ ಭುವನೇಶ್ವರಿಯಾಗಿ ನಮ್ಮನ್ನೆಲ್ಲ ಕಾಪಾಡುವ ಚಾಮುಂಡೇಶ್ವರಿ ಹೆಣ್ಣಲ್ಲವೇ?

ಎಲ್ಲೆಡೆಯೂ, ಎಲ್ಲರ ಬಾಳಿನಲ್ಲೂ ತಾಯಿಯಾಗಿ, ಸಂಗಾತಿಯಾಗಿ, ಮಗಳು, ಮೊಮ್ಮಗಳಾಗಿ, ಸಹೋದರಿಯಾಗಿ, ಸೊಸೆಯಾಗಿ

ಸಂಪೂರ್ಣವಾಗಿ ಆವರಿಸಿರುವ ಹೆಣ್ಣಿಗೊಂದುದಿನವೆಂದುಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರತಿ ವರ್ಷ ಮಾರ್ಚ್ ಎಂಟನೇ ತಾರೀಖು ಆಚರಿಸಲಾಗುತ್ತದೆ. ಭಾರತೀಯ ಮಹಿಳೆಯರಿಗೆ ಪ್ರತಿ ದಿನವೂ ಮಹಿಳಾ ದಿನವೇ.. ಏಕೆಂದರೆ ಅವರಿಲ್ಲದ ದಿನವನ್ನು ಊಹಿಸಲಸಾಧ್ಯವಲ್ಲವೇ?

ಹೆಣ್ಣುಸಮಾಜದಕಣ್ಣು,ಹೆಣ್ಣೊಂದುಕಲಿತರೆ ಶಾಲೆಯೊಂದು ತೆರೆದಂತೆ, ತೊಟ್ಟಿಲು ತೂಗುವ ಕೈ ಜಗವನ್ನಾಳಬಹುದು, ಬೇಟಿ ಬಚಾವೊ ಬೇಟಿ ಪಡಾವೊ ಇತ್ಯಾದಿ ಘೋಷಣೆಗಳನ್ನು ಈಗ ಕೇಳುತ್ತಲೇ ಇರುತ್ತೇವೆ.

ಹಾಗೆಯೇ ನಮ್ಮ ಪುರಾಣಗಳಲ್ಲಿರುವಂತೆ

ಕಾರ್ಯೇಷು ದಾಸಿ, ಕರಣೇಷು ಮಂತ್ರಿ;
ಭೋಜೇಷು ಮಾತಾ, ಶಯನೇಷು ರಂಭ;

ರೂಪೇಷು ಲಕ್ಷ್ಮಿ, ಕ್ಷಮಾಯೇಷು ಧರಿತ್ರಿ;
ಸತ್ಕರ್ಮ ನಾರಿ, ಕುಲಧರ್ಮ ಪತ್ನಿ॥

ಅರ್ಥಾತ್ ಕಾರ್ಯೇಷು ದಾಸಿ ಎಂದರೆ ಶ್ರಮಜೀವಿ. ಕರಣೇಷು ಮಂತ್ರಿ ಅದ್ಭುತ ಸಲಹೆಗಾರ್ತಿ. ರೂಪೇಚ ಲಕ್ಷ್ಮಿ ಎಂದರೆ ಸುಂದರಿ, ಐಶ್ವರ್ಯ ಸಮೃದ್ಧತೆಯ ಪ್ರತೀಕ. ಕ್ಷಮೆಯಾ ಧರಿತ್ರಿಯೆಂದರೆ ಕ್ಷಮಾಶೀಲ ಗುಣವನ್ನು ಹೊಂದಿದಾಕೆ. ಭೋಜ್ಯೇಷು ಮಾತಾ ಎಂದರೆ ಅನ್ನಪೂರ್ಣೆಯಾಗಿ ಕುಟುಂಬದ ಕಾಳಜಿ, ಮಕ್ಕಳ ಲಾಲನೆ ಪಾಲನೆಗೈಯುವಳು. ಶಯನೇಷು ರಂಭ ಎಂದರೆ ಪ್ರೀತಿ ಪ್ರಣಯದಲ್ಲು ಭಾಗಿ ಇಂತಹ ಸತ್ಕರ್ಮ ನಾರಿಯೇ ಪತ್ನಿಯೆಂದು ನಮ್ಮ ಪೂರ್ವಜರು ಹೆಣ್ಣಿನ ಬಗ್ಗೆ ವ್ಯಾಖ್ಯಾನಿಸಿದ್ದಾರೆ.

ಕಾಲ ಬದಲಾದಂತೆ ಆಚಾರ ವಿಚಾರಗಳು, ಆರ್ಥಿಕ ಸಾಮಾಜಿಕ ಚಿಂತನೆಗಳು ಬದಲಾಗುತ್ತಿವೆ. ಇಂದು ಪುರುಷರಿಗೆ ಸಮನಾಗಿ ನಾರಿಯು ಸಹ ದುಡಿದು ಆರ್ಥಿಕ ಸ್ವಾವಲಂಬನೆ ಗಳಿಸಿದ್ದಾಳೆ. ಸ್ತ್ರೀ ಎಂದರೆ ಕೇವಲ ಹೆತ್ತು ಹೊತ್ತು ಪೋಷಣೆ ಮಾಡುವ ಭೋಗದ ವಸ್ತುವಲ್ಲ. ಸ್ತ್ರೀ ಎಂದರೆ ಆದಿಶಕ್ತಿ, ಜಗನ್ಮಾತೆ, ಪರಾಶಕ್ತಿ ದೈವ ಸ್ವರೂಪಿಣಿ ಆಗಿರುವಳು. ಪ್ರಕೃತಿಯೇ ಆಕೆಗೆ ವಿಭಿನ್ನ ದೈಹಿಕ ಸ್ವರೂಪ ನೀಡಿದೆ. ಆಕೆಯ ಮಾನಸಿಕ ಸಮತೋಲನೆ, ದೈಹಿಕ ಕ್ಷಮತೆ, ವಿಭಿನ್ನ ಮತ್ತು ವಿಶಿಷ್ಟವಾದ ಗುಣಗಳು ಆಕೆಗೆ ವಿಶೇಷ ಸ್ಥಾನಮಾನಗಳನ್ನು ನೀಡಿವೆ. ಪ್ರಕೃತಿಯಲ್ಲಿನ ಹೆಚ್ಚಿನ ಸ್ಥಿರಾಸ್ಥಿರ ವಸ್ತುಗಳನ್ನು ನಾವು ಸ್ತ್ರೀ ಗೆ ಹೋಲಿಸುತ್ತೇವೆ ಮತ್ತು ಭೂಮಿಯನ್ನು ಭೂ ಮಾತೆಯೆಂದು ಕರೆಯುತ್ತೇವೆ. ನಮ್ಮ ದೇಶವನ್ನು ಭ

ಪ್ರಖ್ಯಾತ ತಜ್ಞರಿಂದ ಮಕ್ಕಳಿಗೆ ಮಾರ್ಗದರ್ಶನ

ಬಾದಾಮಿ : ತಾಲೂಕಿನ ಕರಡಿಗುಡ್ಡ ಎಸ್.ಎನ್. ಗ್ರಾಮದ ಪಿ.ಎಂ.ಶ್ರೀ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿಗುರುವಾರಪ್ರಖ್ಯಾತತಜ್ಞಮಾರ್ಗದರ್ಶಕ, ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಚಂದ್ರಶೇಖರ್ ಹೆಗಡೆ ಇವರು ಪರಿಸರ ಮತ್ತು ಕನ್ನಡ ಭಾಷೆ ಜ್ಞಾನ ಜಾನಪದ ಸಾಹಿತ್ಯ ಬಗ್ಗೆ ಮಕ್ಕಳಿಗೆ ಮನಮುಟ್ಟುವಂತೆ ತಮ್ಮ ವಾಗ್ಚರಿಯಿಂದ ಮಕ್ಕಳ ಮನಸ್ಸನ್ನು ಗೆದ್ದರು. ಜನಪದ ಹಾಡುಗಳನ್ನು ಹಾಡಿ ಮಕ್ಕಳು ಕೂಡ ಅವರ ಜೊತೆಯಲ್ಲಿ ಹಾಡಿ ಸಂತೋಷ ಪಟ್ಟರು. ಪರಿಸರದ ಬಗ್ಗೆ ಅನೇಕ ಉದಾಹರಣೆಗಳ ಮೂಲಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು ಡಿವಿಜಿಯವರ ಮಂಕುತಿಮ್ಮನ ಕಗ್ಗದ ಸಾಲುಗಳನ್ನು ತಿಳಿಸಿದರು. ಸ್ಥಳೀಯ ಆರ್.ಎಂ.ಎಸ್.ಎ.ಪ್ರೌಢಶಾಲೆಯ ಮುಖ್ಯಶಿಕ್ಷಕ ಉಜ್ವಲ ಬಸರಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಎಂ.ಪಿ.ಎಸ್.ಶಾಲೆಯ ಮುಖ್ಯಶಿಕ್ಷಕ ಎಸ್.ಆರ್. ಕಟಗಿ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಫಕೀರಪ್ಪ ಕೆಂಪಣ್ಣವರ ಸ್ವಾಗತಿಸಿದರು. ರವಿ ಲೆಂಕೆಪ್ಪನ್ನವರ ನಿರೂಪಿಸಿದರು.ಆರ್.ಆರ್.ಹಲಕುರ್ಕಿ ವಂದಿಸಿದರು. ಕಾರ್ಯಕ್ರಮದಲ್ಲಿ ಸಹಶಿಕ್ಷಕರು, ಶಾಲೆಯ ಸರ್ವ ಶಿಕ್ಷಕರ ಬಳಗ, ಎಸ್.ಡಿ.ಎಂ.ಸಿ.ಪದಾಧಿಕಾರಿಗಳು, ಅಕ್ಷರದಾಸೋಹ ಸಿಬ್ಬಂದಿಗಳು, ಶಾಲಾ ಮಕ್ಕಳು ಹಾಜರಿದ್ದರು.

ಜೀವನದಲ್ಲಿಯ ಬದುಕು ದಾನ ಧರ್ಮಕ್ಕಾಗಿ

ತಾಳಿಕೋಟೆ : ಆಸ್ತಿ ಅಂತಸ್ತು ಏನೇ ಇರಲಿ ಗಳಿಸಿದ್ದನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲಾ ಇದ್ದಾಗ ದಾನ ಧರ್ಮ ಮಾಡುವ ಪದ್ಧತಿಯೊಂದಿದ್ದರೆ ಶರಣರ ತತ್ವ ಸಿದ್ಧಾಂತಗಳನ್ನು ಇಡೇರಿಸಿದಂತಾಗುತ್ತದೆ ಎಂದು ಖ್ಯಾತ ಪುರಾಣ ಪ್ರವಚನಕಾರರಾದ ಶರಣಸೋಮನಾಳದ ಶ್ರೀ ಮಹಾದೇವಯ್ಯ ಶಾಸ್ತ್ರೀಗಳು ನುಡಿದರು.

ಮಂಗಳವಾರರಂದುಶ್ರೀಶರಣಮುತ್ಯಾರವರ ಜಾತ್ರೋತ್ಸವ ನಿಮಿತ್ಯವಾಗಿ ಶ್ರೀಮಠದ ಪ್ರಾಂಗಣದಲ್ಲಿ ಏರ್ಪಡಿಸಲಾದ ಶ್ರೀ ಪವಾಡ ಬಸವೇಶ್ವರರವರ ಮಹಾ ಪುರಾಣದ 4ನೇ ದಿನದಂದು ಮಾತನಾಡುತ್ತಿದ್ದ ಅವರು ಮಾನವನಿಗೆಧರ್ಮ,ಅರ್ಥ,ಕಾಮ,ಮೋಕ್ಷ, ಎಂಬ ಚತುರ್ವೇದ ಪುರುಷಾರ್ಥಗಳು ಬೇಕಾಗುತ್ತವೆ ಮೊದಲನೇಯದ್ದಾಗಿ ತೊಟ್ಟಿಲಲ್ಲಿ ತೂಗೂವ 4 ಹಗ್ಗಳ ಮುಖಾಂತರ ತೊಟ್ಟಿಲ ತೂಗಲಾಗುತ್ತದೆ ಅದಕ್ಕೆ ಧರ್ಮ ಎನ್ನಲಾಗುತ್ತದೆ ಎಂದರು. ಅರ್ಥವೆಂಬುದು ಧರ್ಮದ ಸಂಪತ್ತಾಗಬೇಕು ಮನುಷ್ಯನಾದವನಿಗೆ ಅರ್ಥವೆಂಬುದು ಇರಬೇಕೆಂದರು. ಪರಶುದ್ದವಾದ ಬಧುಕಿನಿಂದ ಬಧುಕುವದೇ ಕಾಮ ಎನ್ನುವದ್ದಾಗಿದ್ದು ಯಾರಿಗೂ ನೋವು ಮಾಡದೇ ಬಧುಕುವದಾಗಿದ್ದು ಮೋಕ್ಷವೆಂಬುದು ಮಕ್ಕಳನ್ನು ಹೆತ್ತು 5 ವರ್ಷ ಪ್ರೀತಿಯಿಂದ ತಂದೆಯಾದವನು ಕಾಣಬೇಕಾಗುತ್ತದೆ ಎಂದರು.

10 ವರ್ಷಗಳ ನಂತರ ತಿದ್ದಿ ಬುದ್ದಿಹೇಳುವದಾಗಬೇಕು ಗುರು ಹಿರಿಯರಲ್ಲಿ ಹೇಗೆ ಬಧುಕಬೇಕೆಂಬ ಸದ್ಬುದ್ದಿಯನ್ನು ಕಲಿಸಬೇಕು ಇಂತಹ ವಯಸ್ಸಿನಲ್ಲಿ ನೀಡಿದ ಸಂಸ್ಕಾರದಂತೆ ಮಕ್ಕಳು ಸಂಸ್ಕಾರವಂತರಾಗಿ ಬಾಳಿ ಬಧುಕುತ್ತಾರೆ 16 ವರ್ಷದ ನಂತರ ಒಳ್ಳೆಯ ಸಂಸ್ಕಾರ ಕೊಡುವಂತಾಗಬೇಕು ಅಳುವ ಮಗುವಿನ ಬಗ್ಗೆ ಕಂಡು ಹಿಡಿಯುವದೇ ತಾಯಿಯಾದವಳ ಕರ್ತವ್ಯವಾಗಿದೆ ಎಂದರು. ತಾಯಿ ತನ್ನೋಳಗಿರುವಂತಹ ಒಳ್ಳೆಯ ಸಂಸ್ಕಾರವನ್ನು ನೀಡಿದರೆ ಮಗ ಬುದ್ದಿವಂತನಾಗುತ್ತಾನೆಂದು ಹೇಳಿದ ಶಾಸ್ತ್ರೀಗಳು ದಡ್ಡ ವಿದ್ಯಾರ್ಥಿಗೆ ಶಿಕ್ಷಕನಾದವ ಆತನ ತಾಯಿಗೆ ಪತ್ರ ಒಂದನ್ನು ಬರೆದು ಆ ವಿದ್ಯಾರ್ಥಿ ಕೈಯಲ್ಲಿ ಕೊಟ್ಟಾಗ ಆ ವಿದ್ಯಾರ್ಥಿ ಆ ಪತ್ರವನ್ನು ತಾಯಿಯ ಕೈಯಲ್ಲಿ ನೀಡುತ್ತಾನೆ ಆ ಪತ್ರ ನೋಡಿದ ತಾಯಿ ದುಃಖಬರೀತಳಾಗುತ್ತಾಳೆ ಇದನ್ನು ಅರೀತ ಆ ವಿದ್ಯಾರ್ಥಿ ತಾಯಿಗೆ ಕೇಳಿದಾಗ ನೀನು ಒಳ್ಳೆಯ ಬುದ್ದಿವಂತನಾಗಿದ್ದಿ ಅದನ್ನೇ ಶಿಕ್ಷಕರು ಬರೆದಿದ್ದಾರೆಂದು ಸುಳ್ಳುತನವನ್ನು ಮಗನಿಗೆ ತಿಳಿಸಿ ಮನೆಯಲ್ಲಿಯೇ ಆ ತಾಯಿ ದಡ್ಡ ಮಗನಿಗೆ ಶಿಕ್ಷಣ ನೀಡಿದ್ದರಿಂದ ಚಾಣಾಕ್ಷನಾದ ಆ ಮಗ ತಾಮಸ್‌ಯಡಿಶನ್ ಎಂಬ ಹೆಸರು ಪಡೆದು ಲೈಟ್ ಬಲ್ಬ ಕಂಡು ಹಿಡಿದವನಾಗುತ್ತಾನೆಂದು ಹೇಳಿದ ಶಾಸ್ತ್ರೀಗಳು ಮುಂದೊಂದು ದಿನ ಆ ಪ್ರಶಸ್ತಿ ಆತನಿಗೆ ದೊರೆತಾಗ ಶಿಕ್ಷಕ ಬರೆದ ಪತ್ರ ಓದಿ ಆ ಪ್ರಶಸ್ತಿ ಎಂಬುದು ನನ್ನ ತಾಯಿಗೆ ಮುಟ್ಟಬೇಕೆಂದು ಹೇಳಿದಂತಹ ತಾಮಸ್ ಯಡಿಶನ್‌ನ ಕಥೆಯೊಂದನ್ನು ಹೇಳಿದ ಶಾಸ್ತ್ರೀಗಳು ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಡಬೇಕೆಂದರು. ಜೀವನದಲ್ಲಿ ಜಪ ತಪ ಇಲ್ಲದಿದ್ದರೂ ಬಂದವರಿಗೆ ತುತ್ತು ಅನ್ನ ಹಾಕುವ ಕಾರ್ಯ ಮಾಡಿದರೆ ಅದುವೇ ಪುಣ್ಯದ ಕೆಲಸವಾಗಲಿದೆ ಎಂದರು.

ಶರಣರಾದ ಗುರುಲಿಂಗಪ್ಪನವರ ಮಲ್ಲಮ್ಮ ಅವರ ಉದರದಲ್ಲಿ ಗಂಡು ಮಗು ಜನಿಸುತ್ತದೆ ಸಾತ್ವಿಕಳಾದ ಮಲ್ಲಮ್ಮ ಹೆತ್ತ ಮಗು ಬಸವಣ್ಣನೆಂದು ನಾಮಕರಣ ಮಾಡಲಾಗುತ್ತದೆ ಬಸವಣ್ಣನವರ ಆಮಕರಣ ಮಾಡಿದ ಪದ್ಧತಿಯಂತೆ ಸುಮಂಗಲೆಯರೂ ಕೂಡಾ ತೊಟ್ಟಿಲ ಕಾರ್ಯಕ್ರಮವನ್ನು ಪದ್ಧತಿಯಂತೆ ನೆರವೇರಿಸಿ ಬಸವಣ್ಣನೆಂಬ ನಾಮಕರಣವೂ ಕೂಡಾ ಈ ಕಾರ್ಯಕ್ರಮದಲ್ಲಿ ಮಾಡಿ ಜೋಗೂಳ ಪದಗಳನ್ನು ಹಾಡಿ ಹರಿಸಲಾಯಿತು. ಸಾಂಭಪ್ರಭು ಶರಣರು ಅನೇಕ ಪವಾಡಗಳನ್ನು ಗೈದಿದ್ದರ ಕುರಿತು ಭಕ್ತ ಸಮೂಹಕ್ಕೆ ವಿವರಿಸಿದರು.

ಈ ಸಮಯದಲ್ಲಿ ಶ್ರೀ ಶರಣರ ಮಠದ ಬಸಣ್ಣ ಶರಣಮುತ್ಯಾರವರು, ಶರಣಪ್ಪಮುತ್ಯಾರವರು, ಆನಂದ ಶರಣರು, ಸಂಗಮೇಶ ಶರಣರು, ಕಾಶಿರಾಯ ದೇಸಾಯಿ, ಗುರುಮೂರ್ತಿ ಹಿರೇಮಠ, ಮಹಾದೇವಿ ಹಾವಿನಾಳ,ಮಲ್ಲಣ್ಣಶರಣರು, ಭೀಮಣ್ಣ ಇಂಗಳಗಿ, ಗುರು ಶರಣರು, ಸಾಹಿಲ್ ಮುರಾಳ, ಮೊದಲಾದವರು ಉಪಸ್ಥಿತರಿದ್ದರು.

ಸಂಗೀತ ಸೇವೆಯನ್ನು ರಾಜು ಗುಬ್ಬೇವಾಡ, ಬಸನಗೌಡ ಬಿರಾದಾರ ಅವರು ನಡೆಸಿಕೊಟ್ಟರು.

ಶರಣಗೌಡ ಪೊಲೀಸ್‌ಪಾಟೀಲ ಸ್ವಾಗತಿಸಿದರು. ಈರಣ್ಣ ಶರಣರ ನಿರೂಪಿಸಿ ವಂದಿಸಿದರು.

ಹಳೆಯ ವಿದ್ಯಾರ್ಥಿಯಿಂದ ಶಾಲೆಗೆ ಟಿವಿ ದೇಣಿಗೆ



ಬಾದಾಮಿ : ತಾಲೂಕಿನ ಹೆಬ್ಬಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶಾಲೆಯ ಹಳೆಯ ವಿದ್ಯಾರ್ಥಿ ಆರೋಗ್ಯ ನಿರೀಕ್ಷಕ ಎಚ್.ಎಸ್. ಮಲ್ಲಾಪೂರ. ಇವರು ಶಾಲೆಗೆ 32 ಇಂಚಿನ ಎಲ್.ಇ.ಡಿ. ಟಿವಿಯನ್ನು ದೇಣಿಗೆ ನೀಡಿದರು. ಈ ಸಂದರ್ಭದಲ್ಲಿ ಮುಖ್ಯಶಿಕ್ಷಕಿ ಕಮಲಾಕ್ಷಿ ಗಾಣಿಗೇರ, ಸಹಶಿಕ್ಷಕರು, ಶಾಲಾ ಮಕ್ಕಳು ಹಾಜರಿದ್ದರು.

ಸರ್ಕಾರದ ಕೆಲಸ ಶ್ರೀ ಮಂಜುನಾಥ ಸಂಸ್ಥೆ ಮಾಡುತ್ತಿದೆ: ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ

ಕೊಲ್ಹಾರ : ಪಟ್ಟಣದ ಶ್ರೀ ವಿಠ್ಠಲ ದೇವಸ್ಥಾನದ ಸಭಾಂಗಣದಲ್ಲಿ ಮಂಗಳವಾರ ಶ್ರೀ ಮಂಜುನಾಥ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ವಿಕಲಚೇತನರಿಗೆ ಗಾಲಿ ಕುರ್ಚಿ ಸೈಕಲ್ ವಿತರಣೆ ಸಮಾರಂಭವನ್ನು ಮಾಜಿ ಸಚಿವ ಎಸ್ ಕೆ ಬೆಳ್ಳುಬ್ಬಿ ಉದ್ಘಾಟಿಸಿದರು. ಉದ್ಘಾಟನೆ ಮಾಜಿ ಸಚಿವ ಎಸ್ ಕೆ ಬೆಳ್ಳುಬ್ಬಿ ಮಾತನಾಡಿ ಪಟ್ಟಣದ ನಿರುದ್ಯೋಗಿ ಮಹಿಳೆಯರಿಗೆ ಉಚಿತ ಉದ್ಯೋಗ ತರಬೇತಿ ನೀಡಿ ಸ್ವ ಉದ್ಯೋಗ ಮಾಡಿ ತಮ್ಮ ಕುಟುಂಬಕ್ಕೆ ಆರ್ಥಿಕ ಸಹಕಾರ ನೀಡುವ ಮತ್ತು ವಿಕಲಚೇತನರಿಗೆ ಉಚಿತವಾಗಿ ಗಾಲಿ ಕುರ್ಚಿ ಸೈಕಲ್ ಮತ್ತು ಮನೆ ನಿರ್ಮಾಣ ಮಾಡಿ ಕೊಡುವುದು ಸರ್ಕಾರ ಮಾಡದ ಕೆಲಸವನ್ನು ಶ್ರೀ ಮಂಜುನಾಥ ಗ್ರಾಮಾಭಿವೃದ್ಧಿ ಸಂಸ್ಥೆ ಮಾಡುತ್ತಿದೆ ಇದು ನಿಜವಾದ ಉತ್ತಮ ಸಮಾಜದ ಕಾರ್ಯವಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಪ್ರಗತಿಪರ ರೈತ ಸಿದ್ದಪ್ಪ ಬಾಲಗೊಂಡ ಮಾತನಾಡಿ ಈ ಸಂಸ್ಥೆಯು ಎಲೆಮರೆಯ ಕಾಯಿಯಂತೆ ಸಮಾಜ ಸೇವೆ ಮಾಡುವುದು ಈ ಸೇವೆಯನ್ನು ನಾವುಗಳು ಸರಿಯಾಗಿ ಬಳಸಿಕೊಂಡು ನಿಮ್ಮ ಜೀವನ ರೂಪಿಸಿಕೊಳ್ಳಲು ಆ ಮಂಜುನಾಥ ದೇವರು ನಿಮಗೆ ಕರುಣಿಸಿದ್ದಾನೆ ಎಂದು ತಿಳಿಸಿದರು.

ಅತಿಥಿಗಳಾಗಿ ತಾಲ್ಲೂಕು ಯೋಜನಾಧಿಕಾರಿ ಪ್ರಸನ್ನ ಆರ್, ತರಬೇತಿದಾರರು ಸ್ಮೀತಾ ಕರಣೆ, ತಾಲ್ಲೂಕ ಸಮನ್ವಯ ಅಧಿಕಾರಿ ಸಂಗೀತಾ ಮಡಿವಾಳರ, ವಲಯ ಮೇಲ್ವಿಚಾರಕಿ ಸುಮಂಗಲಾ,ಈರಮ್ಮ,ಸಕ್ಕುಬಾಯಿ ಕ್ಷತ್ರಿ,ಪ್ರೀಯಾಂಕಾ, ಯಶೋಧಾ, ಇಂದ್ರಾ, ಭಾರತಿ ಹಾಗೂ ಸೇವಾ ಸಂಘದ ಸದಸ್ಯರು ಪಾಲ್ಗೊಂಡಿದ್ದರು.

ನಿಂಗಪ್ಪ ಹೊನವಾಡ ನಿಧನ

ಬನಹಟ್ಟಿ : ನಗರದ ಗಣ್ಯ ವ್ಯಾಪಾರಸ್ಥರು, ಹಟಗಾರ ಪತ್ತಿನ ಸಹಕಾರಿ ಸಂಘ ನಿ ಇದರ ಮಾಜಿ ಅಧ್ಯಕ್ಷರಾಗಿದ್ದ ನಿಂಗಪ್ಪ ಹೊನವಾಡ ತಮ್ಮ 92 ನೆಯ ವಯಸ್ಸಿನಲ್ಲಿ ಮಾರ್ಚ್ 6 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಆರು ಜನ ಸುಪುತ್ರಿಯರು, ಮೂರು ಜನ ಸುಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಯೋಜನಾಬದ್ಧ ಅಧ್ಯಯನ ಸಾಧನೆಗೆ ಸಹಕಾರಿ: ಸಿ.ಎಂ. ನೆಮಗೌಡ

ಚಿಮ್ಮಡ : ಸ್ಪಷ್ಟ ಗುರಿ, ಅಚಲ ಛಲ, ಕಠಿಣ ಪರೀಶ್ರಮದೊಂದಿಗೆ ಯೋಜನಾ ಬದ್ಧವಾಗಿ ಅಧ್ಯಯನ ಮಾಡಿದಲ್ಲಿ ಉತ್ತಮ ಸಾಧನೆ ಮಾಡಬಹುದು ಎಂದು ನಿವೃತ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎಂ. ನೆಮಗೌಡ ಹೇಳಿದರು. ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸತ್ಕಾರ ಸಮಾರಂಭದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಎಲ್ಲಾ ವಿಷಯಗಳ ಕುರಿತು ತಿಳುವಳಿಕೆ ಮೂಡಿಸಿಕೊಳ್ಳಬೇಕು, ವಿಶೇಷವಾಗಿ ತಮಗೆ ಆಸಕ್ತಿ ಇರುವ ವಿಷಯದಲ್ಲಿ ಹೆಚ್ಚಿನ ಸಾಧನೆಗೆ ಮುಂದಾಗಬೇಕು, ಶಾಲೆಗಳಲ್ಲಿ ಹಾಗೂ ಮನೆಗಳಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸಿಕೊಡುವುದು ಜತೆಗೆ ಶೈಕ್ಷಣಿಕ ಪ್ರಗತಿಗೆ ಪೋಷಕರ ಮತ್ತು ಶಿಕ್ಷಕರ ಸಹಕಾರವೂ ಅವಶ್ಯ. ವೇಳಾಪಟ್ಟಿಯೊಂದಿಗೆ ಅಧ್ಯಯನ ಜತೆಗೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು ಅವಶ್ಯವಾಗಿದೆ ಎಂದು ಸಲಹೆ ನೀಡಿದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರಭು ನೇಸೂರ ಮಾತನಾಡಿ ಶೈಕ್ಷಣಿಕ ಜೀವನದಲ್ಲಿ ಮಹತ್ವದ ಘಟ್ಟವಾಗಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಲು ಸತತ ಅಧ್ಯಯನ ಮಾಡಬೇಕು, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಮೈಗೂಡಿಸಿಕೊಳ್ಳಬೇಕು, ಮಕ್ಕಳ ಭವಿಷ್ಯಕ್ಕಾಗಿ ಎಲ್ಲರೀತಿಯ ನೆರವು ನೀಡುವ ಪಾಲಕರಿಗೆ ಉತ್ತಮ ಫಲಿತಾಂಶ ಪಡೆಯುವ ಮೂಲಕ ಗೌರವ ತರಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯೆ ಶ್ರೀಮತಿ ಎಂ.ಎಸ್. ಜಿಟ್ಟಿ, ಸಿಆರ್ಪಿ ಸಮನ್ವಯ ಅಧಿಕಾರಿ ದ್ರಾಕ್ಷಾಯಿಣಿ ಮಂಡಿ. ಶಿಕ್ಷಕ ಡಿ.ಬಿ. ಬಡಿಗೇರ, ಶ್ರೀಮತಿ ಜಿ.ಎಸ್. ಕುಲಕರ್ಣಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಎಸ್ಡಿಎಂಸಿಅಧ್ಯಕ್ಷಮಾರುತಿಮಮದಾಪೂರ, ಪ್ರಕಾಶ ಪಾಟೀಲ, ಉಪನ್ಯಾಸಕ ಎಚ್.ಎಂ. ಕುಂಬಾರ, ಮಹಾದೇವ ಪಾಲಭಾವಿ, ಪ್ರಭು ಆನ್ಯಾಗೋಳ, ಶಿವಪ್ಪಾ ದೊಡಮನಿ, ನಂದೇಶ ಬರಗಲ್ ಸೇರಿದಂತೆ ಹಲವು ಪ್ರಮುಖರು ಆಗಮಿಸಿದ್ದರು.

ಇದೇ ಸಂಧರ್ಬದಲ್ಲಿ ಇತ್ತೀಚೆಗೆ ವರ್ಗಾವಣೆಗೊಂಡಶಿಕ್ಷಕಿಟಿ.ವಿ.ವೀರಗೌಡರ ಅವರನ್ನನು ಸತ್ಕರಿಸಿ ಬೀಳ್ಕೊಡಲಾಯಿತು.

ಕಾರ್ಯಕ್ರಮಕ್ಕೆ ಶಿಕ್ಷಕ ಪಿ.ಬಿ. ಮುಧೋಳ ಸ್ವಾಗತಿಸಿದರು, ಉಷಾ ಬಾಬು ಕಟ್ಟಿಮನಿ ನಿರೂಪಿಸಿದರು. ಎಂ.ಎಲ್. ಜಮಾದರ ವಂದಿಸಿದರು.

ಮಹಿಳಾ ದಿನಾಚರಣೆ ಅಂಗವಾಗಿ ಮಾತಾಜಿ ಶ್ರೀ ಶ್ರೀ ಶ್ರೀ ರಮ್ಯಾನಂದ ಭಾರತಿ ಸ್ವಾಮಿನಿ ಅವರಿಂದ ಬೃಹತ್ ಲಲಿತ ಸಹಸ್ರನಾಮ ಪಾರಾಯಣ ಹಾಗೂ ಸುವಾಸಿನಿ ಪೂಜಾ ಕಾರ್ಯಕ್ರಮ

ಬೆಂಗಳೂರು : ಕುಟುಂಬದ ಸರ್ವತೋಮುಖ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯವಾಗಿದೆ ಎಂದು ತಿರುಪತಿ ಶ್ರೀ ಶಕ್ತಿ ಪೀಠಂ ನ ಮಾತಾಜಿ ಶ್ರೀ ಶ್ರೀ ಶ್ರೀ ರಮ್ಯಾನಂದ ಭಾರತಿ ಸ್ವಾಮಿನಿ ತಿಳಿಸಿದರು.

ಇಂದುಮಹಿಳಾದಿನಾಚರಣೆಯಅಂಗವಾಗಿಕಾಡುಗ-ೋಡಿ ರಸ್ತೆ ವೈಟ್‌ಫೀಲ್ಡ್‌ನಲ್ಲಿರುವ ಮೈತ್ರಿ ಲೇಔಟ್ ಚೈತನ್ಯ ಭಾರತಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಬೃತಹ್ ಲಲಿತ ಸಹಸ್ರನಾಮ ಪಾರಾಯಣ ಹಾಗೂ ಸವಾಸಿನಿ ಪೂಜಾ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಮಹಿಳೆಯರಿಗೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷವಾದ ಸ್ಥಾನಮಾನನೀಡಲಾಗಿದೆ.ಶಕ್ತಿಯಪ್ರತಿರೂಪಮಹಿಳೆ. ಕುಟುಂಬವನ್ನು ಹಾಗೂ ಸಮಾಜವನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಲು ಈ ಶಕ್ತಿಯ ಅವಶ್ಯಕತೆ ಬಹಳಷ್ಟಿದೆ. ಮಹಿಳೆಯರು ತಮ್ಮ ಸ್ವಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಹೆಚ್ಚಿನ ಆದ್ಯತೆ ನೀಡಬೇಕು. ತಮ್ಮ ಕುಟುಂಬವನ್ನು ಅದರ ಜೊತೆಯಲ್ಲೇ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

09 ನೇ ಮಾರ್ಚ್ ಭಾನುವಾರದಂದು ಚೈತನ್ಯ ಸಮರ್ಪನ್, ವೈಟ್‌ಫೀಲ್ಡ್ ಹೊಸಕೋಟೆ ರಸ್ತೆ, ಶಿವನಗರ, ವಾಸ್ತು ಭೂಮಿ ಕನ್ನಮಂಗಲದಲ್ಲಿ ಬೆಳಿಗ್ಗೆ 9 ಗಂಟೆಯಿಂದ 12 ರ ವರೆಗೆ ಪೂಜ್ಯ ಶ್ರೀ ಮಾತಾಜಿಗೆ ಪಾದಪೂಜೆ ನಡೆಯಲಿದೆ. ನಂತರ ಮಾತಾಜಿಯವರಿಂದ ಅನುಗ್ರಹ ಭಾಷಣ ಮತ್ತು ಅನ್ನಪ್ರಸಾದ ನಡೆಯಲಿದೆ.

ಅಂದು ಸಂಜೆ 5 ರಿಂದ 8 ಗಂಟೆಯವರೆಗೆ ಪೂಜ್ಯ ಶ್ರೀ ಮಾತಾಜಿಯವರ ದರ್ಶನ ಮತ್ತು ಮಂತ್ರ ಉಪದೇಶ ನಡೆಯಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಾತಾಜಿಯವರ ಆಶೀರ್ವಾದ ಪಡೆದುಕೊಳ್ಳಬಹುದಾಗಿದೆ.

ಜ್ಞಾನ ಸಂಪತ್ತು ಶ್ರೇಷ್ಠವಾದುದು

ರಬಕವಿ-ಬನಹಟ್ಟಿ:ಇಂದಿನದಿನಗಳಲ್ಲಿಜ್ಞಾನಸಂಪತ್ತು ಶ್ರೇಷ್ಠವಾದುದು.ಆದ್ದರಿಂದಶ್ರದ್ಧೆಮತ್ತುಪರಿಶ್ರಮದಿಂದ ನಾವು ಯಶಸ್ಸು ಪಡೆದುಕೊಳ್ಳಬಹುದಾಗಿದೆ ಎಂದು ಸಮೀಪದ ನಾವಲಗಿ ಗ್ರಾಮ ಪಂಚಾಯಿತಿ ಸದಸ್ಯ ದಾನಪ್ಪ ಆಸಂಗಿ ತಿಳಿಸಿದರು.

ಅವರು ಮಂಗಳವಾರ ನಾವಲಗಿ ಗ್ರಾಮದಲ್ಲಿ ಜೈ ಹನುಮಾನ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದರು.

ಹಿರಿಯ ಜಾನಪದ ಕಲಾವಿದ ಮಲ್ಲಪ್ಪ ಗಣಿ ಮಾತನಾಡಿ, ಶಿಕ್ಷಣದ ಜೊತೆಗೆ ನಮ್ಮ ದೇಶದ ಸಂಸ್ಕೃತಿ ಮತ್ತು ಸಂಸ್ಕಾರವನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕು ಎಂದರು.

ಆಡಳಿತ ಮಂಡಳಿಯ ಅಧ್ಯಕ್ಷ ಹನಮಂತ ಬರಗಾಲ, ಗಂಗಪ್ಪ ವಾಲಿ, ಕೆ. ಪಿ. ಯಡಪ್ಪನವರ, ಬಾಲಚಂದ್ರ ಪಟ್ಟಣಶೆಟ್ಟಿ, ಮಲ್ಲಪ್ಪ ಕಂಪು, ದಾನೇಶ ಕಾಂತಿ, ಮುಖ್ಯ ಶಿಕ್ಷಕ ಎಚ್.